ANANTHKUMAR
PRATISHTHANA

# ಅನಂತಪಥ



ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ

ಸಂಪುಟ - 3 ಆಗಸ್ಟ್ - 2022 ಸಂಚಿಕೆ - 26



# ದಿಗ್ದಿಗಂತದಲ್ಲಿ ತಿರಂಗಾ

ಅದಮ್ಯಚೇತನ ಸೇವಾ ಉತ್ಸವವು ಪ್ರತಿವರ್ಷ ಡಿಸೆಂಬರ್ ಕೊನೆಯಲ್ಲಿ ಪ್ರಾರಂಭವಾಗಿ ಹೊಸವರ್ಷದಲ್ಲಿ ಮುಕ್ತಾಯವಾಗುವ ಕ್ರಮ ಹಲವಾರು ವರ್ಷಗಳಿಂದ ನಡೆದುಕೊಂಡು ಬಂದಿದೆ. ಸಹಸ್ರಾರು ಜನರು ಒಕ್ಕೊರಲಿನಿಂದ ವಂದೇಮಾತರಂ ಗಾಯನದೊಂದಿಗೆ ಹೊಸವರ್ಷವನ್ನು ಸೇವೆಗೆ ಮುಡಿಪಾಗಿಡುವ ಸಂಕಲ್ಪ ತೆಗೆದುಕೊಳ್ಳುವುದರ ಮೂಲಕ ಸ್ವಾಗತಿಸುವುದು ನಮ್ಮ ಉದ್ದೇಶ. ವಸುಧೈವ ಕುಟುಂಬಕಂ, ನಮ್ಮ ದೇಶ-ನಮ್ಮ ಸಂಸ್ಕೃತಿ, ಹಸಿರು-ಉಸಿರು, ಮುಂತಾದ ನಿರ್ದಿಷ್ಟ ವಿಷಯಗಳನ್ನು ಆಧರಿಸಿ ಪ್ರತಿಯೊಂದು ಉತ್ಸವವನ್ನೂ ನಿರೂಪಿಸಲಾಗುತ್ತಿದೆ.

2014ನೇ ಇಸವಿಯು ಭಾರತಕ್ಕೆ, ಅದರಲ್ಲಿಯೂ ಬೆಂಗಳೂರಿಗೆ ಮಹತ್ವದ ವರ್ಷ. ಅದೇ ವರ್ಷ ಸೆಪ್ಟೆಂಬರ್ 24ರಂದು ಬೆಂಗಳೂರಿನ ಭಾರತೀಯ ಅಂತರಿಕ್ಷ ಸಂಶೋಧನಾ ಸಂಸ್ಥೆಯು (ಇಸ್ರೋ) ತನ್ನ ಮಹತ್ವಾಕಾಂಕ್ಷಿ ಯೋಜನೆ ಮಂಗಲಯಾನವನ್ನು ಯಶಸ್ವಿಯಾಗಿ ಕಾರ್ಯಾರಂಭಗೊಳಿಸಿತು. 2015ರ ಜನವರಿ ಒಂದರಂದು ಮಂಗಲಯಾನಕ್ಕೆ ಶತದಿನೋತ್ಸವದ ಸಂಭ್ರಮ. ಹೀಗಾಗಿ 2014-15ರ ಸೇವಾ ಉತ್ಸವವನ್ನು ಭಾರತದ ವೈಮಾನಿಕ ಮತ್ತು ಅಂತರಿಕ್ಷ ಸಾಧನೆಗಳನ್ನು ಮುಖ್ಯ ವಿಷಯವಾಗಿರಿಸಿಕೊಂಡು ಸಾರ್ವಜನಿಕರಿಗೆ ಮತ್ತು ಶಾಲಾ ಮಕ್ಕಳಿಗೆ ಪರಿಚಯಿಸುವ ಪ್ರದರ್ಶಿನಿಗಳನ್ನು ಏರ್ಪಡಿಸಬೇಕೆಂದು ನಿರ್ಧರಿಸಿದ್ದೆವು. ಅದರಂತೆ ಬೆಂಗಳೂರಿನ ಪ್ರಮುಖ ಸಂಸ್ಥೆಗಳಾದ ಡಿಆರ್‌ಡಿಓ, ಎಚ್‌ಎಎಲ್, ಇಸ್ರೋ, ಏಡಿಎಲ್, ಎನ್‌ಎಎಲ್ ಮುಂತಾದ ಸಂಸ್ಥೆಗಳು ಅನಂತಕುಮಾರರ ಮೇಲಿನ ವಿಶ್ವಾಸದಿಂದ ಪ್ರದರ್ಶಿನಿಯಲ್ಲಿ ಭಾಗವಹಿಸಲು ಒಪ್ಪಿಗೆ ಸೂಚಿಸಿದ್ದವು. ಈ ಬಗ್ಗೆ ಅನೇಕ ಬಾರಿ ಸಭೆ ಸೇರಿದ ನಾವು ಉತ್ಸವಕ್ಕೊಂದು ಸೂಕ್ತ ಹೆಸರು ಸೂಚಿಸಲು ವಿಫಲರಾದೆವು. ಕೊನೆಗೆ, ದೆಹಲಿಯಲ್ಲಿದ್ದ ಅನಂತಕುಮಾರರನ್ನೇ ಕೇಳೋಣವೆಂದು ನಾನು ಅವರನ್ನು ಸಂಪರ್ಕಿಸಿದೆ. ಅವರು ಕ್ಯಾಬಿನೆಟ್ ಮೀಟಿಂಗಿಗೆ ಹೋಗುವ ತರಾತುರಿಯಲ್ಲಿದ್ದರು. ಎಂದಿನಂತೆ ಅವರು ಕ್ಷಣಮಾತ್ರದಲ್ಲಿ "ಸರಿ, ಬರೆದುಕೋ, ದಿಗ್ದಿಗಂತದಲ್ಲಿ ತಿರಂಗಾ"ಎಂದುಬಿಟ್ಟರು. ಈ ಹೆಸರನ್ನು ನಮ್ಮ ಸಭೆಯಲ್ಲಿ ಪ್ರಸ್ತಾಪಿಸಿದಾಗ ಎಲ್ಲರಿಗೂ ಮೈಯಲ್ಲಿ ವಿದ್ಯುತ್ ಸಂಚಾರವಾದಂತಾಯಿತು. ಏಕಕಾಲದಲ್ಲಿ ನಮ್ಮ ಉತ್ಸವದ ವಿಷಯದ ವ್ಯಾಪ್ತಿ ದಿಗ್ದಿಗಂತಗಳಿಗೆ ವಿಸ್ತರಿಸಿತು. ಪ್ರದರ್ಶಿನಿಗಳು ಮತ್ತು ಇತರ ಸಂಬಂಧಿತ ವಿಚಾರಗಳ ಕುರಿತು ಸ್ಪಷ್ಟತೆ ದೊರೆಯಿತು.

ಮಾನ್ಯ ಅಟಲ್ ಬಿಹಾರಿ ವಾಜಪೇಯಿ ಮತ್ತು ಅದ್ವಾನಿಯವರ ಮಾರ್ಗದರ್ಶನದಿಂದ ಮೊದಲುಗೊಂಡು ನರೇಂದ್ರ ಮೋದಿಯವರ ಸಮರ್ಥ ನೇತೃತ್ವದಲ್ಲಿ ಭಾರತವು ವೈಮಾಂತರಿಕ್ಷ ಕ್ಷೇತ್ರದಲ್ಲಿ ಅಪೂರ್ವ ಸಾಧನೆಯನ್ನು ಮಾಡಿದೆ. ಭಾರತದ ತ್ರಿವರ್ಣ ಧ್ವಜವು ಜಗತ್ತಿನ ಎಲ್ಲೆಡೆಯೂ ಹಾರಾಡತೊಡಗಿದೆ. ಈಗ ಚಂದ್ರಯಾನದ ಮೂಲಕ ಚಂದ್ರನ ಮೇಲೂ, ಮಂಗಲಯಾನದ ಮೂಲಕ ಮಂಗಳ ಗ್ರಹದ ಮೇಲೂ ರಾರಾಜಿಸತೊಡಗಿದೆ. ಇವೆಲ್ಲವನ್ನೂ ಪ್ರತಿನಿಧಿಸುವಂತೆ "ದಿಗ್ದಿಗಂತದಲ್ಲಿ ತಿರಂಗಾ" ಎನ್ನುವ ಹೆಸರು ಸೂಕ್ತವಾಗಿತ್ತು.

ಬೆಂಗಳೂರಿನಲ್ಲಿ ಅಂತರಿಕ್ಷ ಸಂಶೋಧನೆಗಳಲ್ಲಿ ನಿರತವಾಗಿದ್ದ ಎಲ್ಲ ಸಂಸ್ಥೆಗಳೂ ಪ್ರದರ್ಶನದಲ್ಲಿ ಭಾಗವಹಿಸಿದ್ದವು. ಮಂಗಲಯಾನ ಯೋಜನೆಯಲ್ಲಿ ಮಹಿಳೆಯರ ಪಾತ್ರ ಅಧಿಕವಾಗಿತ್ತು. ಇದನ್ನು ಅನುಲಕ್ಷಿಸಿ ಆ ಎಲ್ಲ ಮಹಿಳಾ ವಿಜ್ಞಾನಿಗಳನ್ನೂ ವಿಶೇಷವಾಗಿ ಸತ್ಕರಿಸಲಾಯಿತು. ಜೊತೆಗೆ ಡಾ. ಯು ಆರ್ ರಾವ್, ಡಾ. ಕೋಟ ಹರಿನಾರಾಯಣ, ಡಾ. ಸಿ ಜಿ ಕೆ ನಾಯರ್, ಡಾ. ಶಿವಕುಮಾರ್, ಡಾ, ತಮಿಳ್ ಮಣಿ ಮುಂತಾದ ಹಿರಿಯ ವಿಜ್ಞಾನಿಗಳನ್ನೂ ಸನ್ಮಾನಿಸಲಾಯಿತು.

ಪುಟ 4 ರಲ್ಲಿ ಮುಂದುವರೆದಿದೆ





# ಚಿಕ್ಕನಾಯಕನಹಳ್ಳಿ- ಹೊಸದುರ್ಗ ಭಾಗದ ದೇಗುಲಗಳು

ದೇಗುಲದರ್ಶನ ಮಾಲಿಕೆ - 13



ದೇಗುಲ ದರ್ಶನ ಮಾಲಿಕೆಯ ಈ ತಿಂಗಳ ಕಾರ್ಯಕ್ರಮದಲ್ಲಿ ಚಿಕ್ಕನಾಯಕನಹಳ್ಳಿ ಹಾಗೂ ಹೊಸದುರ್ಗ ತಾಲೂಕುಗಳ ಕೆಲವು ಪುರಾತನ ದೇವಾಲಯಗಳನ್ನು ಪರಿಚಯಮಾಡಿಕೊಳ್ಳೋಣ. ಚಿಕ್ಕನಾಯಕನಹಳ್ಳಿ ತುಮಕೂರು ಜಿಲ್ಲೆಗೆ ಸೇರಿದ್ದರೆ, ಹೊಸದುರ್ಗ ತಾಲೂಕು ಚಿತ್ರದುರ್ಗ ಜಿಲ್ಲೆಯ ವ್ಯಾಪ್ತಿಯಲ್ಲಿದೆ.

ತುಮಕೂರಿನಿಂದ ತಿಪಟೂರಿಗೆ ಹೋಗುವ ಹೆದ್ದಾರಿಯಲ್ಲಿ ಕೆ.ಬಿ.ಕ್ರಾಸ್ ಎಂಬ ಕೂಡುರಸ್ತೆಯಿದೆ. ಅಲ್ಲಿ ಬಲಕ್ಕೆ ತಿರುಗಿ ಚಿಕ್ಕನಾಯಕನಹಳ್ಳಿಯ ಮಾರ್ಗದಲ್ಲಿ ಸಾಗಿದರೆ ನಾಲ್ಕೈದು ಕಿಮೀ ವ್ಯಾಪ್ತಿಯೊಳಗೇ ಪಂಕಜನಹಳ್ಳಿಯಿದೆ. ಇಲ್ಲಿರುವ ಮಲ್ಲಿಕಾರ್ಜುನನ ದೇವಾಲಯ ವಿಜಯನಗರ ಕಾಲದ್ದು. ವಿಶಾಲವಾದ ಆವರಣ, ಉಬ್ಬುಶಿಲ್ಪಗಳಿರುವ ಕಂಬಗಳು ಗಮನಸೆಳೆಯುತ್ತವೆ. ಇಲ್ಲಿ ಹೊರಮಂಟಪದಲ್ಲಿರುವ ನಂದಿಯ ವಿಗ್ರಹ ಅತ್ಯಾಕರ್ಷಕ. ಘಂಟಾಸರ ಮತ್ತಿತರ ಹೊಯ್ಸಳಶೈಲಿಯ ಒಡವೆಗಳನ್ನು ತೊಟ್ಟ ನಂದಿ ಈ ಮಾದರಿಯ ಸೊಗಸಾದ ಶಿಲ್ಪಗಳಲ್ಲೊಂದು.


ಮುಂದೆ, ಚಿಕ್ಕನಾಯಕನಹಳ್ಳಿಗಿಂತ ಎಂಟು ಕಿಮೀ ಮೊದಲೇ ಶೆಟ್ಟಿಗೆರೆ ಎಂಬ ಗ್ರಾಮವಿದೆ. ಇಲ್ಲಿರುವ ಯೋಗಮಾಧವ ದೇವಾಲಯ ಹೊಯ್ಸಳ ಕಾಲದ ವಿಶಿಷ್ಟವಾದ ದೇಗುಲ. ಯೋಗಸ್ಥಿತಿಯಲ್ಲಿ ಪದ್ಮಾಸನದಲ್ಲಿ ಕುಳಿತ ವಿಷ್ಣುವಿನ ವಿಗ್ರಹ ಮೋಹಕವಾಗಿದೆ. ಇದೇ ಗುಡಿಯಲ್ಲಿ ಕಾಣಸಿಗುವ ವೇಣುಗೋಪಾಲನ ಎತ್ತರವಾದ ಮೂರ್ತಿ ಹೊಯ್ಸಳ ಶೈಲಿಯ ಸುಂದರ ಕೆತ್ತನೆಯಾಗಿದೆ. ತ್ರಿಭಂಗಿಯಲ್ಲಿ ಕೊಳಲೂದುತ್ತ ನಿಂತ ಕೃಷ್ಣ, ಮುರಳೀನಾದವನ್ನು ಆಲಿಸುತ್ತ ನಿಂತ ಗೊಲ್ಲರು, ಗೋಪಿಕೆಯರು ಹಾಗೂ ಗೋವುಗಳು, ಪಾದದೆಡೆಯ ದೇವಿಯರು ಎಲ್ಲದರ ಸೂಕ್ಷ್ಮಚಿತ್ರಣವು ವಿಗ್ರಹದ ಭವ್ಯತೆಯನ್ನು ಮಿಗಿಲುಗೊಳಿಸಿದೆ. ಅಂತೆಯೇ ಇಲ್ಲಿನ ನಡುಮಂಟಪದಲ್ಲಿ ಇರಿಸಲಾಗಿರುವ ಗಣಪತಿ, ಮಹಿಷಮರ್ದಿನಿ, ಲಕ್ಷ್ಮೀನಾರಾಯಣ ಮೊದಲಾದ ಹೊಯ್ಸಳ ಶೈಲಿಯ ವಿಗ್ರಹಗಳು ಶಿಲ್ಪಕಲೆಯ ಅಪೂರ್ವ ಪ್ರತಿಭೆಗೆ ಸಾಕ್ಷಿಗಳಾಗಿವೆ.

ಮುಂದೆ ತಾಲೂಕು ಕೇಂದ್ರವಾದ ಚಿಕ್ಕನಾಯಕನಹಳ್ಳಿಯಲ್ಲಿ ಶ್ರೀ ವೆಂಕಟರಮಣ ದೇವಸ್ಥಾನ ಮತ್ತು ಹಳೆಯೂರು ಆಂಜನೇಯ ದೇಗುಲಗಳನ್ನು ದರ್ಶಿಸಬಹುದು. ಎರಡೂ ವಿಜಯನಗರ ಕಾಲದವು. ದೇಗುಲಮಂಟಪಗಳಲ್ಲಿ ಕಂಬಗಳ ಮೇಲಿನ ಶಿಲ್ಪಗಳು ಆಸಕ್ತಿಮೂಡಿಸುವಂತಿವೆ.

ಚಿಕ್ಕನಾಯಕನಹಳ್ಳಿಯಿಂದ 22 ಕಿಮೀ ದೂರದ ಪಟ್ಟಣ ಹುಳಿಯಾರು. ಇಲ್ಲಿನ ರಂಗನಾಥ, ಮಲ್ಲೇಶ್ವರ ಮತ್ತು ಗಣಪತಿ ದೇವಸ್ಥಾನಗಳೆಲ್ಲವೂ ಹೊಯ್ಸಳ ಕಾಲದವು. ಎಲ್ಲ ಗುಡಿಗಳಲ್ಲೂ ಆಕರ್ಷಕ ಹೊಯ್ಸಳ ಶೈಲಿಯ ವಿಗ್ರಹಗಳಿವೆ. ತನ್ನ ತೋಳನ್ನೇ ದಿಂಬಾಗಿಸಿ ಆದಿಶೇಷನ ಮೇಲೆ ಮಲಗಿದ ರಂಗನಾಥನ ವಿಗ್ರಹದ ಸೊಗಸನ್ನು ನೋಡಿಯೇ ತಿಳಿಯಬೇಕು. ಹೊಕ್ಕುಳಿನ ಕಮಲದಲ್ಲಿ ಕುಳಿತ ಬ್ರಹ್ಮ, ಪಾದದೆಡೆಯ ಲಕ್ಷ್ಮೀದೇವಿ ಎಲ್ಲವೂ ಸುಂದರವಾಗಿ ಚಿತ್ರಿತವಾಗಿವೆ. ವಿಗ್ರಹದ ಮೇಲಂಚಿನಲ್ಲಿ ದಶಾವತಾರದ ಕೆತ್ತನೆಯೂ ಇರುವುದು ವಿಶೇಷ. ಸರ್ಪದ ಮೈಮೇಲಿನ ಹುರುಪೆಗಳೂ ಕಾಣುವಂತೆ ಕೆತ್ತಿರುವ ಶಿಲ್ಪಿಯ ಪ್ರತಿಭೆ ಅನ್ಯಾದೃಶ. ಇತರ ಗುಡಿಗಳಲ್ಲಿರಿಸಿರುವ ಸರಸ್ವತಿ, ಗಣಪತಿ, ಶಿವಪಾರ್ವತಿ, ಕೇಶವ ಮತ್ತಿತರ ವಿಗ್ರಹಗಳೂ ದರ್ಶನೀಯವಾಗಿವೆ.











ಮುಂದೆ, ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲೂಕನ್ನು ಪ್ರವೇಶಿಸೋಣ. ಇಲ್ಲಿ ಮೊದಲಿಗೆ ಹೆಗ್ಗೆರೆ ಎಂಬ ಗ್ರಾಮ. ಇತಿಹಾಸಪ್ರಸಿದ್ಧವಾದ ಈ ಹಳ್ಳಿಯಲ್ಲಿ ಕಲ್ಯಾಣ ಚಾಲುಕ್ಯರ ಕಾಲದ (11ನೇ ಶತಮಾನ) ಶಿವಾಲಯವೊಂದಿದೆ. ಇಲ್ಲಿ ದಾರಾಲಿಂಗವೆಂದು ಕರೆಯಲಾಗುವ ಹದಿನಾರು ಕೋನಗಳುಳ್ಳ ವಿಶಿಷ್ಟ ಶಿವಲಿಂಗವಿದೆ. ಹೆಗ್ಗೆರೆಯಲ್ಲೇ ಇರುವ ಪಾರ್ಶ್ವನಾಥ ಬಸದಿಯೂ ಹೊಯ್ಸಳ ಕಾಲದ್ದು.

ಹೆಗ್ಗೆರೆಯ ಸಮೀಪದಲ್ಲೇ ಬೂದಾಳು ಗ್ರಾಮಕ್ಕೆ ಸೇರಿದಂತಿರುವ ಶ್ರೀರಾಂಪುರ. ಇಲ್ಲಿ ಹೊಯ್ಸಳ ಕಾಲದ ಶಿವಾಲಯ ಮತ್ತು ವೀರಭದ್ರ ದೇಗುಲಗಳಿವೆ. ಗುಡಿಗಳ ಆಸುಪಾಸು ಹಲವು ಭಗ್ನವಿಗ್ರಹಗಳನ್ನೂ ಕಾಣಬಹುದು.

ಹೆಗ್ಗೆರೆಯಿಂದ 22 ಕಿಮೀ ದೂರದ ಕೆಲ್ಲೋಡು ಗ್ರಾಮದ ಆಂಜನೇಯನ ಗುಡಿ ಸುತ್ತಮುತ್ತ ಹೆಸರುವಾಸಿಯಾಗಿದೆ. ದೊಡ್ಡ ಶಿಲೆಯ ಮೇಲಿನ ಹನುಮಂತನ ಉಬ್ಬುಶಿಲ್ಪ ಗಮನಸೆಳೆಯುವಂತಿದೆ. ಆದರೆ, ಶಿಲೆಗೆ ಯಥೇಚ್ಛವಾಗಿ ಬಣ್ಣಗಳನ್ನು ಬಳಿದು ಮೂಲಸ್ವರೂಪ ಗುರುತಿಸುವುದು ಕಷ್ಟ. ಕೆಲ್ಲೋಡಿನಿಂದ 18 ಕಿಮೀ ದೂರದ ನೀರಗುಂದದಲ್ಲಿ ಕಲ್ಯಾಣಿ ಚಾಲುಕ್ಯರ ಕಾಲದ ಸಿದ್ಧೇಶ್ವರ ದೇಗುಲವಿದೆ. 11ನೇ ಶತಮಾನದ ಕಾಲಘಟ್ಟಕ್ಕೆ ಸೇರುವ ಶಿಲಾವಿಗ್ರಹಗಳೂ ಕಂಬಗಳೂ ಆಕರ್ಷಕ ಕುಸುರಿ ಕೆತ್ತನೆಯ ಜಾಲಂದ್ರಗಳೂ ಇಲ್ಲಿಯ ವಿಶೇಷ. ವಿಗ್ರಹಗಳು ಕಾಲಾಂತರದಲ್ಲಿ ಸವೆದಿವೆಯಾದರೂ ಪ್ರಾಚೀನತೆಯ ದೃಷ್ಟಿಯಿಂದ ಈ ದೇಗುಲ ಮಹತ್ತ್ವ ಪಡೆದಿದೆ. ಇದೇ ಊರಿನಲ್ಲಿ ದೊಡ್ಡ ಶಿಲೆಯ ಮೇಲೆ ಮಾರುತಿಯ ರೂಪವನ್ನು ಕೆತ್ತಿರುವ ಪರಿ ಶಿಲ್ಪಕಲಾ ಅಭ್ಯಾಸಿಗಳಿಗೆ ಆಸಕ್ತಿ ಮೂಡಿಸುವಂತಿದೆ. ಈ ಪರ್ಯಟನದ ಕೊನೆಯ ಸ್ಥಳ ಬಾಗೂರು. ಸಣ್ಣಕ್ಕಿ ಬಾಗೂರು, ಭಾಗ್ಯಪುರಿ ಬಾಗೂರು ಎಂಬ ವಿಶೇಷಣಗಳುಳ್ಳ ಈ ಊರಿನಲ್ಲಿ ಚನ್ನಕೇಶವನ ಗುಡಿಯಿದೆ. ಕೇಶವನ ವಿಗ್ರಹ ಹೊಯ್ಸಳ ಕಾಲದ್ದು. ದೇವಾಲಯದ ಕಟ್ಟಡ, ಉಯ್ಯಾಲೆ, ಮಂಟಪ ಮೊದಲಾದವು ವಿಜಯನಗರ ಕಾಲದ ಸೇರ್ಪಡೆಗಳು. ಸಂಕೀರ್ಣದಲ್ಲಿರುವ ಸೌಮ್ಯನಾಯಕಿ ಹಾಗೂ ವೈಕುಂಠ ನಾರಾಯಣನ ವಿಗ್ರಹಗಳು ಸುಂದರವಾಗಿವೆ. ●

**ಟಿ.ಎಸ್. ಗೋಪಾಲ್ / ಕೆಂಗೇರಿ ಚಕ್ರಪಾಣಿ**

ಈ ಕಾರ್ಯಕ್ರಮವನ್ನು ಯೂಟ್ಯೂಬ್ ನಲ್ಲಿ ನೋಡಲು ಬೇಕಾದ ಲಿಂಕ್ ಇಲ್ಲಿದೆ:
http://YouTube.com/AnanthkumarPratishthana

# ಎಥನಾಲ್ ಉತ್ಪಾದನೆ : ಭಾರತದ ಸಾಧನೆ



**ವಿಶ್ವ ಜೈವಿಕ ಇಂಧನ ದಿನದ ಅಂಗವಾಗಿ ವಿಶೇಷ ಲೇಖನ**



**ರಾಮಕೃಷ್ಣ ವೈ.ಬಿ.**

ಪರಿಣತ ಸದಸ್ಯರು, ಜೈವಿಕ ಇಂಧನ ಕಾರ್ಯಪಡೆ, ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯ

(ಭಾರತದಲ್ಲಿ ಸ್ಥಾಪಿತವಾಗುತ್ತಿರುವ ಜೈವಿಕ ಸಂಸ್ಕರಣ ಸ್ಥಾವರಗಳ ಪೈಕಿ ಮೊದಲ ಸ್ಥಾವರವನ್ನು ಹರ್ಯಾಣ ರಾಜ್ಯದ ಪಾಣಿಪತ್ ನಲ್ಲಿ ಸ್ಥಾಪಿಸಲಾಗಿದೆ. ಪ್ರಾಜ್ ಇಂಡಸ್ಟ್ರೀಸ್ ತಂತ್ರಜ್ಞಾನವನ್ನು ಆಧರಿಸಿ ಐ ಒ ಸಿ ಎಲ್ ಸ್ಥಾಪಿಸಿರುವ ಈ ಸ್ಥಾವರವನ್ನು ಇದೇ ಆಗಸ್ಟ್ 10 ರಂದು ಪ್ರಧಾನಿ ಶ್ರೀ ನರೇಂದ್ರ ಮೋದಿಯವರು ಲೋಕಾರ್ಪಣೆ ಮಾಡಿದರು)

1943-45ರಷ್ಟು ಹಿಂದೆಯೇ ಮುಂಬಯಿ ನಗರಸಂಚಾರಿ ಬಸ್ಸುಗಳಲ್ಲಿ ಶೇ.20ರಷ್ಟು ಜೈವಿಕ ಇಂಧನವಾದ ಎಥನಾಲ್ ಮಿಶ್ರಿತ ಪೆಟ್ರೋಲ್ ಬಳಸಲಾಗುತ್ತಿತ್ತು ಎಂದರೆ ಅಚ್ಚರಿಯಾಗುವುದಲ್ಲವೆ? ಭಾರತರತ್ನ ಸರ್ ಎಂ ವಿಶ್ವೇಶ್ವರಯ್ಯನವರ ದೂರದೃಷ್ಟಿಯ ಸಲಹೆಯ ಮೇರೆಗೆ ಪ್ರಾರಂಭವಾದ ಈ ಉಪಕ್ರಮದಲ್ಲಿ ಬಳಸುವ ಎಥನಾಲನ್ನು ಮಂಡ್ಯದ ಸಹಕಾರಿ ಸಕ್ಕರೆ ಕಾರ್ಖಾನೆ ಒದಗಿಸುತ್ತಿತ್ತು.

ಜಗತ್ತು ಇಂಧನದ ಕೊರತೆ ಮತ್ತು ಪರಿಸರ ನಾಶದ ಸಮಸ್ಯೆಯನ್ನು ಎದುರಿಸುತ್ತಿರುವ ಸಂದರ್ಭದಲ್ಲಿ ಬದಲಿ ಇಂಧನಮೂಲಗಳ ಅಗತ್ಯ ಕಂಡುಬಂದಾಗ ನೆರವಿಗೆ ಬಂದದ್ದು ಎಥನಾಲ್. ಭಾರತದ ಗ್ರಾಮೀಣ ಆರ್ಥಿಕತೆ ಮತ್ತು ಉದ್ಯೋಗಸೃಷ್ಟಿಯ ವಿಷಯದಲ್ಲಿ ಎಥನಾಲ್ ಮಹತ್ವದ ಪಾತ್ರ ವಹಿಸಬಲ್ಲದು. ಭಾರತದ ಕೃಷಿಕ್ಷೇತ್ರವು ಅತ್ಯಂತ ಗಂಭೀರವಾದ ಸಮಸ್ಯೆಗಳನ್ನು ಎದುರಿಸುತ್ತಿರುವ ಕಾಲದಲ್ಲಿ ಸುಸ್ಥಿರವಾದ ಅಭಿವೃದ್ಧಿಯನ್ನು ಸಾಧಿಸಲು ಜೈವಿಕ ಇಂಧನ ಯೋಜನೆಯು ಸಹಾಯಕವಾಗುತ್ತದೆಯೆಂದು ಭಾವಿಸಲಾಗಿದೆ.

ಜಗತ್ತಿನ ಜನಸಂಖ್ಯೆಯ ಆರನೇ ಒಂದು ಭಾಗ ಭಾರತದಲ್ಲಿದೆ. ಹೀಗಿದ್ದರೂ ಭಾರತವು ಅತ್ಯಂತ ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಒಂದಾಗಿದೆ. ಅಭಿವೃದ್ಧಿಯ ವೇಗಕ್ಕೆ ಪ್ರಮುಖ ಕಾರಣಗಳಲ್ಲಿ ನಿರಂತರವಾದ ಇಂಧನಪೂರೈಕೆಯೂ ಒಂದು. ಭಾರತದಲ್ಲಿ ಬಳಕೆಯಾಗುತ್ತಿರುವ ಇಂಧನದಲ್ಲಿ ತೈಲ ಮತ್ತು ಅನಿಲಗಳ ಪ್ರಮಾಣ ಶೇ. 35 ರಷ್ಟಿದೆ. ಆದರೆ, ಇದರಲ್ಲಿ ಶೇ. 83ರಷ್ಟು ತೈಲ ಮತ್ತು ಶೇ. 46ರಷ್ಟು ಅನಿಲವನ್ನು ನಾವು ಆಮದು ಮಾಡಿಕೊಳ್ಳುತ್ತಿದ್ದೇವೆ. 2017-18ರಲ್ಲಿ ನಮ್ಮ ದೇಶವು ಆಮದು ಮಾಡಿಕೊಂಡ ಇಂಧನದ ಬೆಲೆ 6,15,892 ಕೋಟಿ ರೂಪಾಯಿಗಳು ಎಂದಮೇಲೆ ದೇಶದ ಅರ್ಥವ್ಯವಸ್ಥೆಯ ಮೇಲೆ ಇದರ ಹೊರೆ ಎಷ್ಟಿದೆ ಎಂಬುದನ್ನು ಊಹಿಸಬಹುದು.

**ಇಂಧನ ಸ್ವಾವಲಂಬನೆ – ಎಥನಾಲಿನ ಪಾತ್ರ**

ಕಳೆದ 22 ವರ್ಷಗಳಲ್ಲಿ ಭಾರತದಲ್ಲಿ ಇಂಧನದ ಬಳಕೆ ದ್ವಿಗುಣಗೊಂಡಿದೆ. ತತ್ಪರಿಣಾಮವಾಗಿ ಆಮದು ಇಂಧನದ ಮೇಲೆ ನಮ್ಮ ಅವಲಂಬನೆಯೂ ಅಧಿಕವಾಗಿದೆ. ಹೀಗಾಗಿ, ದೇಶದ ಪ್ರಗತಿಗೆ ಇಂಧನ ಸ್ವಾವಲಂಬನೆ ಅಗತ್ಯವಾಗಿದ್ದು 2022ರಲ್ಲಿ ಆಮದಿನ ಪ್ರಮಾಣದಲ್ಲಿ ಶೇ 10ರಷ್ಟು ಕಡಿತವನ್ನು ಸಾಧಿಸಬೇಕೆಂಬ ಗುರಿಯನ್ನು ಮಾನ್ಯ ಪ್ರಧಾನ ಮಂತ್ರಿಗಳು ಇಂಧನ ಇಲಾಖೆಗೆ ನೀಡಿದ್ದರು. ಶೇ.10ರಷ್ಟು ಎಥನಾಲನ್ನು ಪೆಟ್ರೋಲಿಗೆ ಮಿಶ್ರಣ ಮಾಡುವ ಮೂಲಕ ಈ ಗುರಿಯನ್ನು ನಿಗದಿತ ಅವಧಿಗಿಂತ ಏಳು ತಿಂಗಳು ಮುಂಚಿತವಾಗಿಯೇ ಸಾಧಿಸಲಾಗಿದೆ ಎಂಬುದು ಪ್ರಶಂಸಾರ್ಹ.

ಈ ಸಾಧನೆ ಸಾರ್ವಜನಿಕರ ತಿಳುವಳಿಕೆಗೆ ಇನ್ನೂ ಬಂದಿಲ್ಲವೆಂಬುದು ಅಷ್ಟೇ ವಿಷಾದಕರ. ಈ ಸಾಧನೆಯ ಹಾದಿ ಸುದೀರ್ಘವಾದದ್ದು. ಪೆಟ್ರೋಲಿಗೆ ಎಥನಾಲ್ ಮಿಶ್ರಣ ಮಾಡುವ ಯೋಜನೆಯನ್ನು ಪ್ರಾರಂಭಿಸಿದ ಶ್ರೇಯಸ್ಸು ವಾಜಪೇಯಿ ನೇತೃತ್ವದ ಸರಕಾರದಲ್ಲಿ ಪೆಟ್ರೋಲಿಯಂ ಖಾತೆಯ ಸಚಿವರಾಗಿದ್ದ ಶ್ರೀ ರಾಮ ನಾಯ್ಕ್ ಅವರಿಗೆ ಸಲ್ಲಬೇಕು. 2003ರಲ್ಲಿ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ ಮತ್ತು ಸಮಗ್ರ ವಿಕಾಸ ಎಂಬ ಸ್ವಯಂಸೇವಾ ಸಂಸ್ಥೆ ಜೊತೆಗೂಡಿ ತಯಾರಿಸಿದ ಪ್ರಸ್ತಾಪವನ್ನು ಶ್ರೀ ರಾಮ ನಾಯ್ಕ್ ತೆರೆದಮನದಿಂದ ಸ್ವೀಕರಿಸಿದರು. ಮಹತ್ವಾಕಾಂಕ್ಷೆಯಿಂದ ಪ್ರಾರಂಭವಾದ ಈ ಯೋಜನೆ ಮುಂದಿನ ದಶಕದಲ್ಲಿ ಮುಗ್ಗರಿಸತೊಡಗಿತು. ಸರಕಾರದ ಬೆಲೆ ನಿರ್ಧಾರಣ ನೀತಿಯು ತೈಲ ಉತ್ಪಾದಕ ಕಂಪೆನಿಗಳಿಗೆ ಲಾಭದಾಯಕವಾಗಿರಲಿಲ್ಲ. ಹೀಗಾಗಿ, ಆ ಕಂಪೆನಿಗಳು ಯೋಜನೆಯಲ್ಲಿ ಉತ್ಸಾಹವನ್ನು ತೋರಲಿಲ್ಲ. 2009ರಲ್ಲಿ ಜೈವಿಕ ಇಂಧನಗಳ ರಾಷ್ಟ್ರೀಯ ನೀತಿಯನ್ನು ನಿರೂಪಿಸಿ 2017ರ ಹೊತ್ತಿಗೆ ಶೇ 20ರಷ್ಟು ಜೈವಿಕ ಇಂಧನದ ಬಳಕೆಯ ಗುರಿಯನ್ನು ನಿಗದಿಸಲಾಗಿತ್ತು. ಆದರೆ, ಈ ಗುರಿಯನ್ನು ಸಾಧಿಸಲು ಯಾವ ಕಾರ್ಯಯೋಜನೆಯನ್ನೂ ಸರಕಾರ ರೂಪಿಸಿರಲಿಲ್ಲ.

**ಮೋದಿ ಸರಕಾರದಲ್ಲಿ**

2014ರಲ್ಲಿ ಅಧಿಕಾರ ಸ್ವೀಕರಿಸಿದ ಕೂಡಲೇ ಮೋದಿ ಸರಕಾರವು ಜೈವಿಕ ಇಂಧನ ಬಳಕೆಯ ಪರಾಮರ್ಶೆ ನಡೆಸಿತು. ಅದುವರೆಗಿನ ಹನ್ನೊಂದು ವರ್ಷಗಳಲ್ಲಿ ಕೇವಲ ಶೇ. 1.4ರಷ್ಟು ಮಾತ್ರ ಗುರಿಸಾಧನೆಯ ಆಘಾತಕಾರಿ ವರದಿಯನ್ನು ಗಮನಿಸಿ ಯೋಜನೆಯ ಅನುಷ್ಠಾನಕ್ಕಾಗಿ 2015ರಲ್ಲಿ ರಾಷ್ಟ್ರೀಯ ಕಾರ್ಯತಂಡವನ್ನು ರಚಿಸಿತು. ಪೆಟ್ರೋಲಿಯಂ ಮತ್ತು ಪ್ರಾಕೃತಿಕ ಅನಿಲ ಸಚಿವಾಲಯವು ಜೈವಿಕ ಇಂಧನ ವಿಭಾಗವೊಂದನ್ನು ತೆರೆಯಿತು. ಜೈವಿಕ ಇಂಧನವನ್ನು ಬದಲಿ ಇಂಧನವಾಗಿ ಬಳಸುವ ಯೋಜನೆಗೆ ಆದ್ಯತೆ ನೀಡುವಂತೆ ಆದೇಶ ನೀಡಿದ ಪ್ರಧಾನ ಮಂತ್ರಿಗಳು 2022ರ ಗುರಿಯನ್ನು ಶೇ. 10ಕ್ಕೆ ನಿಗದಿಪಡಿಸಿದರು.

ಕಾರ್ಯಯೋಜನೆಯ ಶೀಘ್ರ ಅನುಷ್ಠಾನಕ್ಕಾಗಿ ಸರಕಾರವು ಅನೇಕ ಕ್ರಮಗಳನ್ನು ತೆಗೆದುಕೊಂಡಿತು. ಕೈಗಾರಿಕಾ ಅಭಿವೃದ್ಧಿ ಮತ್ತು ನಿಯಂತ್ರಣ ಅಧಿನಿಯಮಕ್ಕೆ ತಿದ್ದುಪಡಿ ಮಾಡಿ ಪರಿವರ್ತಿತ ಎಥನಾಲ್ ಮೇಲೆ ರಾಜ್ಯ ಸರಕಾರಗಳು ಹೊಂದಿದ್ದ ನಿಯಂತ್ರಣವನ್ನು ತೆಗೆದುಹಾಕಿತು. ಸಕ್ಕರೆ ಉದ್ಯಮಕ್ಕೆ ಬಡ್ಡಿ ರಿಯಾಯಿತಿ ಯೋಜನೆಯನ್ನೂ ಜಾರಿಗೆ ತಂದಿತು. ಜೊತೆಗೆ ಬೆಲೆ ನಿಗದಿಪಡಿಸುವ ವ್ಯವಸ್ಥೆಯನ್ನೂ ನಿರೂಪಿಸಿತು.

ಭಾರತ ಸರಕಾರವು ಜೈವಿಕ ಇಂಧನದ ಬಳಕೆಗೆ, ಅಭಿವೃದ್ಧಿಗೆ ಮತ್ತು ಅಗತ್ಯ ಮೂಲಸಾಮಗ್ರಿಗಳ ದೇಶೀಯ ಉತ್ಪಾದನೆಗೆ ಪ್ರೋತ್ಸಾಹ ನೀಡುವ ಮೂಲಕ ಪಳೆಯುಳಿಕೆ ಇಂಧನಗಳಿಗೆ ಬದಲಿ ಇಂಧನಗಳ ಬಳಕೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ 2018ರಲ್ಲಿ ರಾಷ್ಟ್ರೀಯ ಜೈವಿಕ ಇಂಧನ ನೀತಿಯನ್ನು ಜಾರಿಗೆ ತಂದಿತು. ದೇಶದ ಇಂಧನ ಭದ್ರತೆ, ಹವಾಮಾನ ವ್ಯತ್ಯಯದ ಪರಿಣಾಮಗಳನ್ನು ತಗ್ಗಿಸುವುದು ಮತ್ತು ಉದ್ಯೋಗಸೃಷ್ಟಿಯ ತ್ರಿವಳಿ ಉದ್ದೇಶಗಳಿಂದ ಈ ನೀತಿಯನ್ನು ರೂಪಿಸಲಾಗಿದೆ. 2030ರ ವೇಳೆಗೆ ಪೆಟ್ರೋಲಿನ ಜೊತೆಗೆ ಶೇ. 20 ಎಥನಾಲ್ ಮತ್ತು ಡೀಸೆಲ್ ಜೊತೆಗೆ ಶೇ. 5ರಷ್ಟು ಬಯೋ ಡೀಸೆಲ್ ಮಿಶ್ರಣದ ಗುರಿಯನ್ನು ಪೆಟ್ರೋಲಿಯಂ ಸಚಿವಾಲಯವು ಹೊಂದಿದೆ. (ಪುಟ 8 ರಲ್ಲಿ ಮುಂದುವರೆದಿದೆ)


**ಅನಂತ ಪ್ರೇರಣಾ ಕೇಂದ್ರ**

ಅದಮ್ಯ ಚೇತನ, ಸೌತ್ ಎಂಡ್ ವೃತ್ತ, ಜಯನಗರ, ಬೆಂಗಳೂರು

ಕೇಂದ್ರವು ವಾರದ ದಿನಗಳಲ್ಲಿ ಬೆಳಗಿನ 9.30 ಗಂಟೆಯಿಂದ ಸಂಜೆ 6.00 ಗಂಟೆಯವರೆಗೆ ತೆರೆದಿರುತ್ತದೆ. ಪ್ರವೇಶ ಉಚಿತ.

ಸಂಪರ್ಕ ಸಂಖ್ಯೆ- 8904623967

# “ಅನಂತಕುಮಾರರ ಹೋರಾಟದ ಬದುಕು ಸ್ಫೂರ್ತಿದಾಯಕ”




ಕಳೆದ 22 ಜುಲೈ 2022ರಂದು ಅನಂತಕುಮಾರ್ ಪ್ರತಿಷ್ಠಾನದ ಪ್ರಕಾಶನ ವಿಭಾಗವು ಮಹತ್ವದ ಮೈಲುಗಲ್ಲು ತಲುಪಿತು. ಅಂದು, ಅನಂತಪಥ ಪತ್ರಿಕೆಯ 25ನೇ ಸಂಚಿಕೆಯನ್ನು ಬಿಡುಗಡೆ ಮಾಡಲಾಯಿತು. ಅನಂತಪಥದ 25ನೇ ಸಂಚಿಕೆಯನ್ನು ವಿಕಾಸಸೌಧದಲ್ಲಿ ಬಿಡುಗಡೆ ಮಾಡಿದವರು ರಾಜ್ಯ ಜಲ ಸಂಪನ್ಮೂಲ ಸಚಿವರಾದ ಶ್ರೀ ಗೋವಿಂದ ಎಂ. ಕಾರಜೋಳ ಅವರು. ಈ ಸಂದರ್ಭದಲ್ಲಿ ಮಾತನಾಡಿದ ಶ್ರೀಯುತರು, “ಅನಂತಪಥದ 25 ನೆಯ ಸಂಚಿಕೆಯನ್ನು ಬಿಡುಗಡೆ ಮಾಡುತ್ತಿರುವುದು ನನ್ನ ಪಾಲಿಗೆ ಸಂತೋಷದ ವಿಷಯ, ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಲೇಖನಗಳು ಗುಣಮಟ್ಟದಿಂದ ಕೂಡಿದ್ದು, ಓದುವವರಿಗೆ ತಮ್ಮ ಜ್ಞಾನವನ್ನು ಹೆಚ್ಚಿಸಿಕೊಳ್ಳಲು ಸಹಕಾರಿಯಾಗಿವೆ” ಎಂದರು.

ಈ ಸಂದರ್ಭದಲ್ಲಿ ಸಚಿವರು ಅನಂತಕುಮಾರರ ಜೀವನ, ವ್ಯಕ್ತಿತ್ವ, ಸಾಧನೆಗಳನ್ನು ನೆನಪಿಸಿಕೊಂಡರು. ಸದಾ ಉತ್ಸಾಹದ ಚಿಲುಮೆಯಾಗಿದ್ದ ಅನಂತಕುಮಾರರ ಹೋರಾಟದ ಜೀವನ 1970ರ ದಶಕದಲ್ಲಿಯೇ ಪ್ರಾರಂಭವಾಯಿತು. ರಾಜಕೀಯ ಜೀವನದಲ್ಲಿ ಅವರು ಮಾಡಿರುವ ಕೆಲಸದ ಮಹತ್ವ ಒಂದು ಕಡೆಯಾದರೆ, ಅವರು ವಿದ್ಯಾರ್ಥಿ ಜೀವನದಲ್ಲಿ ನಡೆಸಿದ ಹೋರಾಟದ ಬದುಕು ಮತ್ತೊಂದು ದಾಖಲೆ ಎಂದು ಅವರು ಹೇಳಿದರು. ಭಾರತೀಯ ಜನತಾ ಪಕ್ಷವು ರಾಜ್ಯದಲ್ಲಿ ಭದ್ರ ನೆಲೆ ಕಾಣುವಲ್ಲಿ ಅನಂತಕುಮಾರ್ ಮತ್ತು ಯಡಿಯೂರಪ್ಪ ಅವರ ಪಾತ್ರ ಅಪಾರ. ಅನಂತಕುಮಾರರು ಜನಪ್ರಿಯ ನಾಯಕರಾಗಿದ್ದರು. ಕಾರ್ಯಕರ್ತರನ್ನು ಒಗ್ಗೂಡಿಸುವುದು, ಸಭೆ, ಸಮಾವೇಶಗಳನ್ನು ಹಳ್ಳಿಗಳಲ್ಲಿ ಆಯೋಜನೆ ಮಾಡುವುದು, ಕಾರ್ಯಕರ್ತರನ್ನು, ಸ್ಥಳೀಯ ಮುಖಂಡರು ಮತ್ತು ಸಾರ್ವಜನಿಕರನ್ನು ಆತ್ಮೀಯತೆಯಿಂದ ಮಾತನಾಡಿಸಿ, ಅವರೊಂದಿಗೆ ಆತ್ಮೀಯತೆಯನ್ನು ಬೆಳೆಸಿಕೊಳ್ಳುವುದು ಅನಂತಕುಮಾರರಿಗೆ ಬದುಕಿನ ಭಾಗವೇ ಆಗಿತ್ತು. ಅನಂತಕುಮಾರರ ಹೋರಾಟ ವಿದ್ಯಾರ್ಥಿ ದಿನಗಳಿಂದ ಪ್ರಾರಂಭವಾಗಿ, ಕೇಂದ್ರದಲ್ಲಿ ಮಂತ್ರಿಯಾಗುವವರೆಗೂ ನಡೆದುಕೊಂಡು ಬಂದಿದೆ.

ಅವರ ಹೋರಾಟದ ಬದುಕು, ಜೀವನದ ಹಾದಿಗಳು ನಮ್ಮಂಥವರಿಗೆ ಮಾರ್ಗದರ್ಶಕ ಮತ್ತು ಸ್ಫೂರ್ತಿದಾಯಕ ಎಂದು ಗೋವಿಂದ ಕಾರಜೋಳ ಹೇಳಿದರು.

ಅನಂತಕುಮಾರರು ಕೇಂದ್ರ ಸರಕಾರದಲ್ಲಿ ಮಂತ್ರಿಯಾಗಿದ್ದಾಗ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ನಡುವೆ ಸೇತುವೆಯಾಗಿದ್ದರು. ರಾಜ್ಯದ ಕೆಲಸಗಳನ್ನು ಸುಲಲಿತವಾಗಿ ಮಾಡಿಸಿಕೊಡುತ್ತಿದ್ದರು. ರಾಜ್ಯದ ಅನೇಕ ಕೆಲಸಕಾರ್ಯಗಳ ನಿಮಿತ್ತ ನಾವು ದೆಹಲಿಗೆ ಹೋದ ಸಂದರ್ಭದಲ್ಲಿ ಆಯಾ ಇಲಾಖೆಗಳಿಗೆ ಸಂಬಂಧಿಸಿದ ಮಂತ್ರಿಗಳನ್ನು, ಅಧಿಕಾರಿಗಳನ್ನು ಕರೆಯಿಸಿ ನಮ್ಮ ಕೆಲಸ ಮಾಡಿಸಿಕೊಡುವಂತೆ ಅವರಿಗೆ ಹೇಳುತ್ತಿದ್ದರು. ಅನಂತಕುಮಾರರ ಸಾಧನೆಗಳು ಸಮಾಜದಲ್ಲಿ ಅಜರಾಮರವಾಗಿ ಉಳಿಯಬೇಕು. ಅವರು ಸಾಗಿದ ಹಾದಿಯಲ್ಲಿ ನಾವು ಸಾಗಬೇಕು. ಅವರ ನೆನಪಿನಲ್ಲಿ ಅನಂತಕುಮಾರ್ ಪ್ರತಿಷ್ಠಾನವು ನಿರಂತರವಾಗಿ ನಡೆಸುವ ಕಾರ್ಯಕ್ರಮಗಳಲ್ಲಿ ಭಾಗಿಯಾಗುವುದು ನನ್ನ ಸೌಭಾಗ್ಯ ಎಂದು ಅವರು ಹೇಳಿದರು. ಅದಮ್ಯ ಚೇತನ ಸಂಸ್ಥೆಯ ಅಧ್ಯಕ್ಷರಾದ ಡಾ. ತೇಜಸ್ವಿನಿ ಅನಂತಕುಮಾರ್ ಮಾತನಾಡಿ, ಅನಂತಕುಮಾರ್ ಪ್ರತಿಷ್ಠಾನದ ಎಲ್ಲ ಸದುದ್ದೇಶಗಳನ್ನು ನಾವು ನಿಷ್ಠೆಯಿಂದ ಜಾರಿ ಮಾಡುತ್ತೇವೆ. ವ್ಯಕ್ತಿತ್ವ, ನೇತೃತ್ವ ಮತ್ತು ಕರ್ತೃತ್ವಗಳ ನೆಲೆಯಲ್ಲಿ ಸಂಸ್ಥೆಯು ಕೆಲಸ ಮಾಡುವುದೆಂಬ ಭರವಸೆಯನ್ನು ನಾನು ನೀಡುತ್ತೇನೆ. ಪ್ರತಿಷ್ಠಾನದ ಕಾರ್ಯಗಳಿಗೆ ಪ್ರೋತ್ಸಾಹ ನೀಡುತ್ತಿರುವ ಕರ್ನಾಟಕ ರಾಜ್ಯ ಸರಕಾರಕ್ಕೆ ಪ್ರತಿಷ್ಠಾನದ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ ಎಂದು ಹೇಳಿದರು. ಇದೇ ಸಂದರ್ಭದಲ್ಲಿ ಮಾತನಾಡಿದ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಕುಲಪತಿ ಶ್ರೀ ವಿಷ್ಣುಕಾಂತ ಚಟಪಲ್ಲಿ ಅವರು ಅನಂತಕುಮಾರ್ ಜೊತೆಗಿನ ತಮ್ಮ 47 ವರ್ಷಗಳ ಸ್ನೇಹವನ್ನು ನೆನಪಿಸಿಕೊಂಡರು.

ಅನಂತಕುಮಾರ್ ಪ್ರತಿಷ್ಠಾನದ ಅಧ್ಯಕ್ಷರಾದ ಶ್ರೀ ಪಿ.ವಿ. ಕೃಷ್ಣಭಟ್ಟರು ಮಾತನಾಡಿ, ಅನಂತಕುಮಾರರು ಮೊದಲು ವಿದ್ಯಾರ್ಥಿ ಪರಿಷತ್ತಿನಲ್ಲಿ ಕಾರ್ಯಕರ್ತರಾಗಿ ಕೆಲಸ ಮಾಡಿ, ಸಂಪೂರ್ಣ ವ್ಯಕ್ತಿತ್ವ ನಿರ್ಮಾಣ ಮಾಡಿಕೊಂಡು, ನಾಯಕತ್ವದ ಲಕ್ಷಣಗಳನ್ನು ಸ್ವಯಂ ರೂಢಿಸಿಕೊಂಡು ನಂತರ ರಾಜಕೀಯಕ್ಕೆ ಪ್ರವೇಶ ಪಡೆದಿದ್ದರು ಎಂದು ಹೇಳಿದರು.



ಇವತ್ತಿನ ಸಂದರ್ಭದಲ್ಲಿ ಯುವ ಸಮುದಾಯ ನೇರವಾಗಿ ರಾಜಕಾರಣಕ್ಕೆ ಪ್ರವೇಶ ಪಡೆಯುತ್ತಿದ್ದಾರೆ. ಇದರಿಂದ ರಾಜಕೀಯ ಕ್ಷೇತ್ರ ಕಲುಷಿತಗೊಂಡಿದೆ. ಪಕ್ಷಕ್ಕೆ ಸೇರ್ಪಡೆಯಾದವರನ್ನು ಪಕ್ಷದ ಉದ್ದೇಶಕ್ಕೆ ಬಳಸಿಕೊಳ್ಳಲಾಗುತ್ತಿದೆ. ಇಂತಹ ಸಂದರ್ಭದಲ್ಲಿ ರಾಜಕೀಯ ಕ್ಷೇತ್ರ ಶುದ್ಧವಾಗಬೇಕಾದರೆ, ಪ್ರಾಮಾಣಿಕ, ನಿಷ್ಠಾವಂತ ಕಾರ್ಯಕರ್ತರು ರಾಜಕೀಯವನ್ನು ಪ್ರವೇಶಿಸಬೇಕು. ಅಂಥವರನ್ನು ಗುರುತಿಸಿ, ಪ್ರೇರಣೆ ತುಂಬಿ, ಹೊಸ ನಾಯಕತ್ವವನ್ನು ರೂಪಿಸುವ ಕೆಲಸವು ಅನಂತಕುಮಾರ್ ಪ್ರತಿಷ್ಠಾನದಿಂದ ನಡೆಯಬೇಕಾಗಿದೆ. ಇದಕ್ಕೊಂದು ವ್ಯವಸ್ಥೆಯನ್ನು ನಿರ್ಮಿಸುವುದು ನಮ್ಮ ಜವಾಬ್ದಾರಿ ಎಂದು ಶ್ರೀ ಕೃಷ್ಣ ಭಟ್ಟರು ಹೇಳಿದರು. ●

ಪುಟ 1 ರಿಂದ

## ದಿಗ್ದಿಗಂತದಲ್ಲಿ ತಿರಂಗಾ

ಉತ್ಸವದಲ್ಲಿ ಅಂದಿನ ರಕ್ಷಣಾ ಮಂತ್ರಿಗಳಾಗಿದ್ದ ದಿ. ಮನೋಹರ ಪರಿಕ್ಕರ್ ಭಾಗವಹಿಸಿದ್ದರು. ಸೇವಾ ಉತ್ಸವದಲ್ಲಿ ಭಾಗವಹಿಸಿದ್ದ ಪದ್ಮಭೂಷಣ ಡಾ. ಯು ಆರ್ ರಾವ್ ಮಾತನಾಡಿ, “ಸುಮಾರು ನೂರು ಮಿಲಿಯ ಮೈಲು ದೂರವನ್ನು ಕ್ರಮಿಸಿ ಮಂಗಳ ಗ್ರಹದ ಕಕ್ಷೆಯಲ್ಲಿ ಸುತ್ತುತ್ತಿರುವ ಉಪಕರಣಕ್ಕೆ ನಾವು ಮಾಡಿದ ವೆಚ್ಚ ಒಂದು ವಿಮಾನದ ತಯಾರಿಕೆಗೆ ತಗಲುವ ವೆಚ್ಚಕ್ಕಿಂತ ಕಡಿಮೆ. ಚಂದ್ರಯಾನ ಮತ್ತು ಮಂಗಳಯಾನಗಳು, ಇಸ್ರೋ ಸಂಸ್ಥೆಯ ಶ್ರೇಷ್ಠ ಸಾಧನೆಗಳು. ಇಂತಹ ಇಸ್ರೋ ಸಂಸ್ಥೆ ಬೆಂಗಳೂರಿನ ಪೀಣ್ಯ ಕೈಗಾರಿಕಾ ವಲಯದ ಒಂದು ಶೆಡ್ಡಿನಲ್ಲಿ 1972ರಲ್ಲಿ ಪ್ರಾರಂಭವಾಯಿತು. ಆರ್ಯಭಟ, ಭಾಸ್ಕರ, ಇನ್ಸಾಟ್ ಮುಂತಾದ ಮೊದಲ ಎಂಟು ಉಪಗ್ರಹಗಳೂ ಇಲ್ಲಿಯೇ ತಯಾರಾದವು. ಇಲ್ಲಿನ ವಿಜ್ಞಾನಿಗಳೆಲ್ಲರೂ ಸಾಮಾನ್ಯ ಕುಟುಂಬಗಳಿಂದ ಬಂದವರು” ಎಂದರು.

ಹತ್ತು ಸಾವಿರ ಕಂಠಗಳಿಂದ ಏಕಕಾಲಕ್ಕೆ ಮೊಳಗಿದ ಸಂಪೂರ್ಣ “ವಂದೇ ಮಾತರಂ” ಗೀತೆಯನ್ನು ಉಲ್ಲೇಖಿಸಿ “ಹೇಗೆ ಹತ್ತು ಸಾವಿರ ಕಂಠಗಳಿಂದ ಹೊಮ್ಮಿದ “ವಂದೇ ಮಾತರಂ” ಗೀತೆಯು ನಗರದ, ದೇಶದ ಮೂಲೆಮೂಲೆಗಳಲ್ಲಿ ಅನುರಣಿಸಿತೋ ಅದೇ ರೀತಿ ಹತ್ತುಸಾವಿರ ಜನರು ಸೇರಿ ಮಾಡುವ ಕ್ರಾಂತಿಯೂ ದಿಗ್ದಿಗಂತಗಳನ್ನು ವ್ಯಾಪಿಸುತ್ತದೆ” ಎಂದು ಹೇಳಿದ ಮಾತುಗಳು ಉತ್ಸವದಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳ ಮನಸ್ಸಿನಲ್ಲಿ ಇಂದಿಗೂ ಅನುರಣಿಸುತ್ತಿದ್ದರೆ ಅಚ್ಚರಿಯೇನಲ್ಲ.

ಅನಂತಕುಮಾರರು ತ್ರಿವರ್ಣ ಧ್ವಜದ ಕೀರ್ತಿ ದಿಗ್ದಿಗಂತಗಳಲ್ಲಿ ಪಸರಿಸುತ್ತದೆ ಎಂದು ಅಂದು ವ್ಯಕ್ತಪಡಿಸಿದ ಇಂಗಿತವು ಇಂದು ಸಾಕಾರಗೊಳ್ಳುತ್ತಿದೆ. ಸುಂದರ ಸದೃಢ ಸಮಾಜದ, ಭಾರತದ ನಿರ್ಮಾಣ ಮಾಡಬೇಕೆಂಬ ಅನಂತಕುಮಾರರ ಕನಸನ್ನು ನನಸು ಮಾಡುವ ಸಂಕಲ್ಪ ನಮ್ಮದಾಗಬೇಕು. ●

**ಡಾ. ತೇಜಸ್ವಿನಿ ಅನಂತಕುಮಾರ್**

ಅನಂತಪಥ

ಅನಂತಪಥ ಮಾಸಪತ್ರಿಕೆಯು ಪ್ರತಿ ತಿಂಗಳ 22ನೆಯ ತಾರೀಕು ತಪ್ಪದೆ ಪ್ರಕಟವಾಗುತ್ತದೆ. ಈ ಪತ್ರಿಕೆಯ ಚಂದಾದಾರರಾಗಿ ಅನಂತಕುಮಾರ್ ಪ್ರತಿಷ್ಠಾನದ ಸೇವಾಚಟುವಟಿಕೆಗಳನ್ನು ಪ್ರೋತ್ಸಾಹಿಸಿ.

ರೂ. 1000 ನೀಡಿ ಚಂದಾದಾರರಾಗಲು ಮತ್ತು ಇತರ ವಿವರಗಳಿಗೆ ಈ ದೂರವಾಣಿ ಸಂಖ್ಯೆಯನ್ನು ಸಂಪರ್ಕಿಸಿ: **8884182415**

# ಅಕ್ಕಿಯಿಲ್ಲದ ಮನೆಯಲ್ಲಿ ಔತಣವೇ?

ಮೈಸೂರಿನಿಂದ ನಂಜನಗೂಡಿಗೆ ಹೋಗುವ ರೈಲು ಚಾಮರಾಜಪುರಂ ನಿಲ್ದಾಣದಿಂದ ಅಶೋಕಪುರದತ್ತ ಸಾಗುವ ಹಾದಿಯಲ್ಲಿ ರೈಲುಹಳಿಯ ಎಡಗಡೆಗೆ ಕೃಷ್ಣಮೂರ್ತಿಪುರ ಬಲಗಡೆಗೆ ಜಯನಗರ ಬಡಾವಣೆಗಳು ಕಾಣಸಿಗುತ್ತವೆ.


ಆಗಿನ ಕಾಲಕ್ಕೆ ಕೃಷ್ಣಮೂರ್ತಿಪುರಂ ಬಡಾವಣೆ ಬಹು ಸುಸಂಸ್ಕೃತರೂ ಮೇಧಾವಿಗಳೂ ಇದ್ದ ತಾಣ. ಪಿಟೀಲ್ ಚೌಡಯ್ಯನವರು, ಸಂಗೀತಗಾರ್ತಿ ಚೊಕ್ಕಮ್ಮನವರು, ಖ್ಯಾತ ಕನ್ನಡ ಪ್ರಾಧ್ಯಾಪಕ ಟಿ.ಎಸ್. ವೆಂಕಣ್ಣಯ್ಯನವರು, ವೈದ್ಯಕೀಯದಲ್ಲಿ ಹೆಸರಾಂತ ಡಾ. ಪಿ.ಡಿ. ಕೃಷ್ಣಸ್ವಾಮಿ, ಡಾ. ವೆಂಕಟೇಶ ಮೂರ್ತಿ ಮೊದಲಾದವರು ಅಲ್ಲಿಯೇ ಇದ್ದರು. ಇದೇ ಕೃಷ್ಣಮೂರ್ತಿಪುರದ ಮೂರನೆಯ ಅಡ್ಡರಸ್ತೆಯ ೧೩೮೩ ನೇ ಸಂಖ್ಯೆಯ ಮೂಲೆಮನೆಯೊಂದರಲ್ಲಿ ಶಾಸ್ತ್ರಿ ಕುಟುಂಬ ವಾಸವಾಗಿತ್ತು. ನಾಡುಹೆಂಚು ಹೊದಿಸಿದ ಸಾಧಾರಣ ಮನೆಯಲ್ಲೇ ಈ ಅವಿಭಕ್ತ ಕುಟುಂಬದ ಸದಸ್ಯರೆಲ್ಲ ಇರುತ್ತಿದ್ದರು. ಶಾಸ್ತ್ರಿ ಸೋದರರಿಗೆ ಮದುವೆಯಾಗಿ ಮಕ್ಕಳಾದ ಮೇಲೂ ಹಲವು ವರ್ಷ ಅವರ ಸಂಸಾರ ಇಲ್ಲಿಯೇ ಉಳಿಯಿತು. ಬಸುರಿಯ ಯೋಗಕ್ಷೇಮವೋ ಬಾಣಂತನದ ಆರೈಕೆಯೋ ಆ ಚಿಕ್ಕ ಮನೆಯಲ್ಲೇ ಸಾಗುವುದು. ಯಾರಿಂದಲೋ ದಾನವಾಗಿ ಬಂದಿದ್ದ ಒಂದು ಹಸುವೂ ಅಲ್ಲೇ ಜಾಗಪಡೆದುಕೊಂಡಿತ್ತು.

ಈ ಕಥೆ ಹೇಳುವ ಕಾಲಕ್ಕೆ ನರಹರಿ ಶಾಸ್ತ್ರಿಗಳಿಗೂ ಮದುವೆಯಾಗಿತ್ತು. ಶಾಸ್ತ್ರಿಗಳ ಕೈಹಿಡಿದ ಅಕ್ಕಯ್ಯಮ್ಮ ದೇವನಹಳ್ಳಿಗೆ ಸಮೀಪದ ಬಂಡುಕೊಡಗೇನಹಳ್ಳಿಯವರು. ಗುಣವಂತೆ, ಶ್ರಮಜೀವಿ. ಹದಿನೆಂಟು ಇಪ್ಪತ್ತು ಜನರಿದ್ದ ಅವಿಭಕ್ತ ಕುಟುಂಬದ ಊಟೋಪಚಾರಗಳ ಜವಾಬ್ದಾರಿಯನ್ನೆಲ್ಲ ತನ್ನ ಮದುವೆಯಾದಂದಿನಿಂದ ಜೀವಿತದ ಕೊನೆಯವರೆವಿಗೂ ಅವಿರತವಾಗಿ ಶ್ರದ್ಧಾಪೂರ್ವಕವಾಗಿ ನಿರ್ವಹಿಸಿದ ಸದ್ಗೃಹಿಣಿ ಅಕ್ಕಯ್ಯಮ್ಮ.


ಕೌಟುಂಬಿಕ ಕಾರಣಗಳಿಂದಾಗಿ ನರಹರಿ ಶಾಸ್ತ್ರಿಗಳು ಉನ್ನತ ಶಿಕ್ಷಣ ವ್ಯಾಸಂಗ ಮಾಡಲಾಗಲಿಲ್ಲವೇನೋ ಸರಿಯೇ. ಆದರೆ ಅವರ ಅಧ್ಯಯನಶೀಲತೆಗೇನೂ ಕೊರತೆಯಾಗಲಿಲ್ಲ. ಮಿತ್ರ ವಿಠಲಶಾಸ್ತ್ರಿಯೊಡನೆ ವೇದಾಧ್ಯಯನ ಮಾಡುತ್ತಿದ್ದುದಲ್ಲದೆ ಸ್ವಂತ ಆಸಕ್ತಿಯಿಂದ ಜ್ಯೋತಿಷಶಾಸ್ತ್ರವನ್ನು ಅಭ್ಯಾಸ ಮಾಡತೊಡಗಿದರು. ರೈಲ್ವೆ ಉದ್ಯೋಗದ ನಡುವೆ ಸಮಯ ಹೇಗೆ ಹೊಂದಿಸಿಕೊಳ್ಳುತ್ತಿದ್ದರೋ ಏನೋ ಜ್ಯೋತಿಷಕ್ಕೆ ಸಂಬಂಧಪಟ್ಟ ಪತ್ರಿಕೆಗಳನ್ನೂ ಗ್ರಂಥಗಳನ್ನೂ ಆಮೂಲಾಗ್ರವಾಗಿ ಅಧ್ಯಯನ ಮಾಡುತ್ತಿದ್ದರು. ಇಪ್ಪತ್ತು ಮಂದಿಗೆ ಕಡಿಮೆಯಿಲ್ಲದಂತೆ ತುಂಬುಸಂಸಾರ ನಡೆಯುತ್ತಿದ್ದ ಮನೆಯ ಹೊರಗಿನ ಚಿಕ್ಕ ಕೊಠಡಿಯಲ್ಲೇ ನರಹರಿ ಶಾಸ್ತ್ರಿಗಳ ವಾಸ್ತವ್ಯ. ಅಲ್ಲೇ ಅವರ ಅಧ್ಯಯನಕ್ಕೆ ಸಂಬಂಧಿಸಿದ ಗ್ರಂಥಗಳಿಗೂ ನೆಲೆ. ಕಾಲೇಜು ಮೆಟ್ಟಲು ಹತ್ತದಿದ್ದ ಶಾಸ್ತ್ರಿಗಳು ಅಣುವಿಜ್ಞಾನದ ಬಗೆಗೂ ಪರಿಣತರಂತೆ ಮಾತನಾಡುವುದನ್ನು ಕಂಡು ಬಂಧು ಮಿತ್ರರಿಗೆಲ್ಲ ಅಚ್ಚರಿ. ಜ್ಯೋತಿರ್ವಿಜ್ಞಾನ, ಜ್ಯೋತಿಷ ಶಾಸ್ತ್ರಗಳ ಬಗೆಗಿನ ಶಾಸ್ತ್ರಿಗಳ ಪಾಂಡಿತ್ಯ ಜನರ ನಡುವೆ ಪ್ರಚಾರ ಪಡೆಯುವುದು ತಡವಾಗಲಿಲ್ಲ. ಶಾಸ್ತ್ರಿಗಳ ಮನೆ ಬಾಗಿಲಲ್ಲಿ ಸದಾ ಜನರ ಗುಂಪು ನೆರೆದೇ ಇರುತ್ತಿದ್ದುದು ಸಾಮಾನ್ಯ ದೃಶ್ಯವಾಯಿತು. ಕೃಷ್ಣಮೂರ್ತಿಪುರದ ಮನೆಬಾಗಿಲಿಗೆ ಬೀಗ ಹಾಕಿದ್ದನ್ನು ತಾವು ಎಂದೂ ಕಂಡಿಲ್ಲ ಎಂದು ಅವರ ಬಂಧುಗಳು ನೆನಪಿಸಿಕೊಳ್ಳುತ್ತಾರೆ. ಶ್ರೀ ಗೋಪಾಲರತ್ನಂ, ಡಾ. ಮರಿಸ್ವಾಮಿ, ಪ್ರಾಧ್ಯಾಪಕ ಜಿ. ಹನುಮಂತರಾವ್ ಮೊದಲಾದ ಮಿತ್ರರು ಶಾಸ್ತ್ರಿಗಳೊಡನೆ ನಡೆಸುತ್ತಿದ್ದ ಚರ್ಚೆಗಳೂ ಕೇವಲ ಲೋಕಾಭಿರಾಮವಾಗಿರದೆ ಜ್ಞಾನಪ್ರದವಾಗಿರುತ್ತಿದ್ದವು. ಅವರ ಬರವಣಿಗೆ ಕೂಡ ಬಹಳ ಚೆನ್ನಾಗಿ ಅಚ್ಚುಕಟ್ಟಾಗಿತ್ತು. ರೈಲ್ವೆ ಇಲಾಖೆಯಲ್ಲಂತೂ ಅಲ್ಲಿನ ಬ್ರಿಟಿಷ್ ಅಧಿಕಾರಿಯಿಂದ ಹಿಡಿದು ಎಲ್ಲ ಸಿಬ್ಬಂದಿಗೂ ಶಾಸ್ತ್ರಿಗಳು ಅಚ್ಚುಮೆಚ್ಚಿನವರಾಗಿದ್ದರು.

ಶಾಸ್ತ್ರಿಗಳು ಯಾವುದೇ ಜಾತಕ ನೋಡಿದರೂ ಬಹಳ ಕ್ಷಿಪ್ರವಾಗಿಯೂ ನಿಖರವಾಗಿಯೂ ಫಲಿತವನ್ನು ಹೇಳಬಲ್ಲವರಾಗಿದ್ದರು. ಈ ಕಾರಣದಿಂದಲೂ ಅವರ ಜನಪ್ರಿಯತೆ ಹೆಚ್ಚಾಗತೊಡಗಿತು. ಜ್ಯೋತಿಷದ ವಿಷಯವೇ ಅಲ್ಲದೆ, ಸ್ವಂತಕ್ಕೆ ಸಂಬಂಧಿಸಿದ ವಿಷಯಗಳ ಬಗೆಗೂ ವ್ಯಾವಹಾರಿಕ ಸಲಹೆ, ಸೂಚನೆಗಳನ್ನೂ ಕೊಡಬಲ್ಲ ಮೇಧಾವಿಯಾಗಿದ್ದ ಅವರ ಭೇಟಿಗಾಗಿ ಹಲವಾರು ಗಣ್ಯರು ಬರುತ್ತಿದ್ದರು. ಇವರಲ್ಲಿ ಲೇಖಕಿ ತ್ರಿವೇಣಿ, ಚಿತ್ರರಂಗದ ಕಣಗಾಲ್ ಪ್ರಭಾಕರ ಶಾಸ್ತ್ರಿ, ಪುಟ್ಟಣ್ಣ ಕಣಗಾಲ್, ರಾಜೇಂದ್ರಸಿಂಗ್ ಬಾಬು, ಸಂಗ್ರಾಮ ಸಿಂಗ್ ಎಂ.ಪಿ.ಶಂಕರ್ ಮೊದಲಾದವರೂ ಸೇರಿದ್ದರು.

ಮುಂದಿನ ಪುಟಕ್ಕೆ








## ಅನಂತಯಾನ

### ಅಧ್ಯಾಯ-2

**ಶ್ರೀ ಅನಂತಕುಮಾರರ ಜೀವನ ಕಥನ**

**ನಿರೂಪಣೆ : ಟಿ.ಎಸ್. ಗೋಪಾಲ್**

ಹಿಂದಿನ ಪುಟದಿಂದ ಮುಂದುವರೆದಿದೆ

# ಅಕ್ಕಿಯಿಲ್ಲದ ಮನೆಯಲ್ಲಿ ಔತಣವೇ?

ಪ್ರೀಮಿಯರ್ ಸ್ಟುಡಿಯೋದ ಮಾಲೀಕರಾದ ಬಸವರಾಜಯ್ಯನವರೂ ಆಗಾಗ ಬರುತ್ತಿದ್ದುದುಂಟು. ನರಹರಿ ಶಾಸ್ತ್ರಿಗಳ ಜ್ಞಾನದ ಹಿರಿಮೆ ಅರಮನೆಯನ್ನು ತಲುಪಲು ತಡವಾಗಲಿಲ್ಲ. ಆ ಕಾಲದಲ್ಲಿ ಅರಸು ಮನೆತನದ ಬಸವರಾಜ ಅರಸ್ ಮತ್ತು ಕೆಂಪರಾಜ ಅರಸ್ ಮೊದಲಾದವರು ಚಲನಚಿತ್ರ ನಿರ್ಮಾಪಕರಾಗಿದ್ದರು. ಅವರು ತಮ್ಮ ವ್ಯವಹಾರಗಳಿಗೆ ಅಗತ್ಯವಾದ ಜ್ಯೋತಿಷದ ನೆರವು ಪಡೆಯುವ ಸಲುವಾಗಿ ನರಹರಿ ಶಾಸ್ತ್ರಿಗಳನ್ನು ಭೇಟಿ ಮಾಡಲು ಬರುತ್ತಿದ್ದರು. ಇವರೇ ಅಲ್ಲದೆ ಅರಸು ಮನೆತನದ ಇನ್ನೊಬ್ಬ ಗಣ್ಯವ್ಯಕ್ತಿ ಗೋಪಾಲ ರಾಜೇ ಅರಸ್ ಅವರ ಮೂಲಕವೂ ನರಹರಿ ಶಾಸ್ತ್ರಿಗಳ ಹಿರಿಮೆ ಅರಮನೆಯನ್ನು ತಲುಪಿತು. ಆಗಿನ ಮಹಾರಾಜ ಶ್ರೀ ಜಯಚಾಮರಾಜ ಒಡೆಯರ್ ಅವರು ವಾಹನವನ್ನು ಕಳುಹಿಸಿ ಶಾಸ್ತ್ರಿಗಳನ್ನು ಬರಮಾಡಿಕೊಂಡು ಜೋಡಿಶಾಲು ಹೊದಿಸಿ ಗೌರವಿಸಿದರು.

ಅಲ್ಲಿಂದ ಮುಂದೆ ಬಹು ವರ್ಷಗಳ ಕಾಲ ಮಹಾರಾಜರೂ ಅವರ ಕುಟುಂಬದ ಸದಸ್ಯರೂ ವಿವಿಧ ವಿಷಯಗಳ ಬಗೆಗೆ ಶಾಸ್ತ್ರಿಯವರ ಸಲಹೆ ಸೂಚನೆಗಳನ್ನು ತಪ್ಪದೆ ಪಡೆಯುತ್ತಿದ್ದರು. ಅರಮನೆಯಲ್ಲಿ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ವೀಕ್ಷಿಸಲು ಶಾಸ್ತ್ರಿಯವರ ಕುಟುಂಬದ ಸದಸ್ಯರಿಗೆಲ್ಲ ವಿಶೇಷ ಆಹ್ವಾನ ಕಳುಹಿಸುತ್ತಿದ್ದುದೂ ಉಂಟು. ನರಹರಿ ಶಾಸ್ತ್ರಿಗಳ ಅಣ್ಣ ನಂಜುಂಡಶಾಸ್ತ್ರಿಗಳು ಅರಮನೆಯ ಆವರಣದಲ್ಲಿದ್ದ ತ್ರಿನೇತ್ರ ದೇವಾಲಯದ ಅರ್ಚಕರೂ ಆಗಿದ್ದು ಅರಮನೆಗೆ ಸಂಬಂಧಿಸಿದ ಪೌರೋಹಿತ್ಯ ಕಾರ್ಯಗಳಲ್ಲಿ ಭಾಗಿಯಾಗುತ್ತಿದ್ದರು. ಮಹಾರಾಜರ ತಂಗಿ (ಅವರನ್ನು ಸುಜಿಬುದ್ಧಿ ಎಂದು ಕರೆಯುತ್ತಿದ್ದರು) ಶಾಸ್ತ್ರಿಗಳನ್ನು ಕಾಣಲು ಒಮ್ಮೊಮ್ಮೆ ಕೃಷ್ಣಮೂರ್ತಿಪುರದ ಮನೆಗೇ ಬರುತ್ತಿದ್ದರು. ಅರಮನೆಯಿಂದ ದೊಡ್ಡ ಕಾರು ಮನೆಯ ಬಾಗಿಲಿಗೆ ಬಂದು ನಿಂತರೆ ಮನೆಯ ಮಕ್ಕಳೇನು, ಬೀದಿಯವರೆಲ್ಲ ಕುತೂಹಲ, ಮೆಚ್ಚುಗೆಗಳಿಂದ ನೋಡುತ್ತ ನಿಲ್ಲುತ್ತಿದ್ದರು. ಶಾಸ್ತ್ರಿಗಳು ತಮ್ಮ ಕೊಠಡಿಯಲ್ಲೇ ಕುಳಿತಿದ್ದು ಬಂದವರಿಗೆ ಸೂಕ್ತ ಸಮಾಧಾನ ಸಲಹೆ ಹೇಳಿ ಕಳುಹಿಸುವರು. ಅರಸು ಮನೆತನಕ್ಕೆ ಸಂಬಂಧಪಟ್ಟ ಕೆಲವರು ಕುದುರೆ ರೇಸ್ ಪಂದ್ಯಗಳಿಗೆ ಬಾಜಿಕಟ್ಟುವ ಹುರುಪಿನವರು. ಶಾಸ್ತ್ರಿಗಳ ಜ್ಯೋತಿಷಬಲದಿಂದ ತಮಗೇನಾದರೂ ಲಾಭವಾದೀತೆಂಬ ಹಂಬಲದಿಂದಲೂ ಮನೆಬಾಗಿಲಿಗೆ ಬರುವುದಿತ್ತು.

ಶಾರೀರಿಕ ಎತ್ತರ, ಆಕರ್ಷಕ ನಿಲುವು, ಬಣ್ಣ, ತೇಜಸ್ವಿ ವ್ಯಕ್ತಿತ್ವಗಳಿಂದಲೂ ಜ್ಞಾನಸಂಪತ್ತಿಯಿಂದಲೂ ಶಾಸ್ತ್ರಿಗಳು ವ್ಯಾಪಕವಾಗಿ ಗೌರವಾದರಗಳಿಗೆ ಪಾತ್ರರಾಗಿದ್ದರು. ಅವರ ಜನಪ್ರಿಯತೆ ಎಷ್ಟರಮಟ್ಟಿಗೆ ವ್ಯಾಪಿಸಿದ್ದಿತೆಂದರೆ, ಶಾಸ್ತ್ರಿಗಳು ಬರುತ್ತಿದ್ದಾರೆಂದು ಗೊತ್ತಾದರೆ, ನಂಜನಗೂಡು ರೈಲಿನ ಚಾಲಕನೂ ಅವರು ಬರುವವರೆಗೆ ಕಾದು ರೈಲನ್ನು ನಿಲ್ಲಿಸಿರುತ್ತಿದ್ದನಂತೆ!

೧೯೨೬ರಲ್ಲಿ ವಿವಾಹವಾದ ನರಹರಿ ಶಾಸ್ತ್ರಿ-ಅಕ್ಕಯ್ಯಮ್ಮ ದಂಪತಿಗೆ ಮೂವರು ಮಕ್ಕಳು. ೧೯೩೦ರಲ್ಲಿ ಹುಟ್ಟಿದ ನಾರಾಯಣ ಶಾಸ್ತ್ರಿ ಹಿರಿಯ ಮಗ. ಐದು ವರ್ಷಗಳ ತರುವಾಯ ೧೯೩೫ರಲ್ಲಿ ಕೃಷ್ಣಸ್ವಾಮಿ, ಮುಂದೆ ೧೯೪೧ರಲ್ಲಿ ಮಗಳು ನಾಗರತ್ನ ಜನಿಸಿದರು. ಇವರೆಲ್ಲ ನಾಡುಹೆಂಚಿನ ಆ ಮನೆಯಲ್ಲೇ ತಮ್ಮ ದೊಡ್ಡಪ್ಪಂದಿರ ಮಕ್ಕಳೊಡನೆ ಬೆಳೆದರು. ತನ್ನ ದೊಡ್ಡಪ್ಪಂದಿರ ಮೊಮ್ಮಕ್ಕಳು ನರಹರಿ ಶಾಸ್ತ್ರಿಗಳನ್ನು ತಾತಾ ಎಂದು ಕರೆಯುವುದನ್ನು ಕೇಳಿ ನಾಗರತ್ನ ತಾನೂ ತಂದೆಯನ್ನು ತಾತಾ ಎಂದೇ ಕರೆಯುತ್ತಿದ್ದಳು. ಮನೆಯೊಳಗೆ ಆಟಪಾಟಕ್ಕೆ ಜಾಗವಿಲ್ಲದ ಕಾರಣ, ಮಕ್ಕಳು ಹೊರಾಂಗಣದಲ್ಲೇ ಆಡುತ್ತಾ ಕಾಲಯಾಪನೆ ಮಾಡುತ್ತಿದ್ದರು. ಮನೆಯ ಕಷ್ಟಕಾರ್ಪಣ್ಯಗಳು ಅರಿವಿಗೇ ಬಾರದಂತೆ ಎಲ್ಲ ಮಕ್ಕಳೂ ಕೈತುತ್ತು ತಿನ್ನುತ್ತ ಜೊತೆಯಲ್ಲಿ ಬೆಳೆದರು. ಇಪ್ಪತ್ತೈದು ಮೂವತ್ತು ಜನರಿದ್ದ ಮನೆಯೊಳಗೆ ಪಾತ್ರೆ ತೊಳೆಯುವುದೋ ಬಟ್ಟೆ ಒಗೆಯುವುದೋ ಮತ್ತೊಂದೋ ಏನಾದರೂ ಚಟುವಟಿಕೆ ನಡೆದೇ ಇರುತ್ತಿತ್ತು.

ಅನ್ನಪೂರ್ಣೆಯೇ ಆಗಿದ್ದ ಅಕ್ಕಯ್ಯಮ್ಮನಂತೂ ಅಡುಗೆಮನೆ ಬಿಟ್ಟು ಬರುವ ಹಾಗೆಯೇ ಇರಲಿಲ್ಲ. ಮಡಿಮೈಲಿಗೆ ತುಸು ಹೆಚ್ಚಾಗಿಯೇ ಅನುಸರಣೆಯಾಗುತ್ತಿದ್ದ ಕಾಲ. ಮನೆಯವರೆಲ್ಲ ಅವರವರ ಕಾಲಾವಕಾಶದಂತೆ ಬಂದು ಊಟಮುಗಿಸಿ ಹೋಗುವವರೆಗೆ ಆಕೆ ಅಡುಗೆಮನೆಯಲ್ಲೇ ಇರುತ್ತಿದ್ದುದು ಅನಿವಾರ್ಯವಾಗಿತ್ತು. ಹಿರಿಯಮಗನ ಬಾಣಂತನಕ್ಕೆಂದು ಬಂಡುಕೊಡಗೇನಹಳ್ಳಿಯ ತವರುಮನೆಗೆ ಹೋಗಿದ್ದ ಅಕ್ಕಯ್ಯಮ್ಮ ತನ್ನ ಜೀವಿತಾವಧಿಯಲ್ಲಿ ತವರೂರಿಗೆ ಹೋಗಿದ್ದೇ ಒಂದೋ ಎರಡೋ ಸಂದರ್ಭಗಳಲ್ಲಿ ಮಾತ್ರ. ಉಳಿದಂತೆ ಆಕೆಯು ತಮ್ಮ ಬದುಕಿನುದ್ದಕ್ಕೂ ಶಾಸ್ತ್ರಿ ಕುಟುಂಬದ ಮನೆವಾರ್ತೆಯಲ್ಲೂ ಗಂಡನ ಅನಾರೋಗ್ಯದ ಸಂದರ್ಭದಲ್ಲಿ ಅವರ ಆರೈಕೆಯಲ್ಲೂ ತೊಡಗಿಕೊಂಡಿರುತ್ತಿದ್ದರು. ಮನೆಯ ಸಂಕಷ್ಟವೇನೇ ಇರಲಿ, ಮನೆಯ ಮಂದಿಗೆ ಊಟದ ವಿಷಯದಲ್ಲಿ ಯಾವುದೇ ಕೊರತೆಯಾಗದಂತೆ ಅಕ್ಕಯ್ಯಮ್ಮ ಎಚ್ಚರವಹಿಸುತ್ತಿದ್ದರು. ಅಣ್ಣತಮ್ಮಂದಿರ ಸಂಬಳದ ಹಣ ಆ ದೊಡ್ಡ ಕುಟುಂಬದ ತಿಂಗಳ ನಿರ್ವಹಣೆಗೆ ಏನೂ ಸಾಲುತ್ತಿರಲಿಲ್ಲ. ನರಹರಿ ಶಾಸ್ತ್ರಿಗಳೋ, ತಮ್ಮಿಂದ ಜ್ಯೋತಿಷದ ಪರಿಹಾರ ಕೇಳಲು ಬರುವ ಜನರಿಂದ ಏನೂ ಪ್ರತಿಫಲ ಬಯಸುತ್ತಿರಲಿಲ್ಲ. ಬಂದವರು ಬಡವರೇ ಇರಲಿ, ಅರಮನೆಯವರೇ ಆಗಿರಲಿ, ಶಾಸ್ತ್ರಿಗಳು ಏನನ್ನೂ ಅಪೇಕ್ಷಿಸುವವರಲ್ಲ. ಬಂದವರೇ ಒಂದಿಷ್ಟು ಹಣ ಕೊಡಲು ಮುಂದಾದರೂ ಅವರು ತೆಗೆದುಕೊಳ್ಳುವವರಲ್ಲ. ಬಂದ ಜನರೇ ತಮ್ಮ ಕಾಣಿಕೆಯೆಂದು ಶಾಸ್ತ್ರಿಗಳು ಕುಳಿತಿದ್ದ ಹಾಸಿಗೆಯ ದಿಂಬಿನ ಅಡಿಯಲ್ಲಿ ಏನಾದರೂ ಇಟ್ಟುಹೋಗುವರು.

ಒಂದು ಸಂದರ್ಭದಲ್ಲಿ ಹೀಗಾಯಿತು. ಮಧ್ಯಾಹ್ನದ ಊಟ ಮುಗಿದಿತ್ತು. ಮನೆಯಲ್ಲಿ ದಿನಸಿಪದಾರ್ಥಗಳು ಕಡಿಮೆಯಿರುವುದನ್ನು ಅಕ್ಕಯ್ಯಮ್ಮ ಮೊದಲೇ ಗಮನಿಸಿದ್ದರು. ಇನ್ನು ರಾತ್ರಿಯ ಊಟಕ್ಕಾಗಿ ಇಪ್ಪತ್ತೈದು ಮೂವತ್ತು ಜನರಿಗಾಗುವಷ್ಟು ಅಡುಗೆ ಮಾಡಲು ಏನೂ ಪದಾರ್ಥಗಳೇ ಇರಲಿಲ್ಲ. ಚಿಂತಾಕ್ರಾಂತರಾದ ಅಕ್ಕಯ್ಯಮ್ಮ ಹೊರಕೋಣೆಯಲ್ಲಿದ್ದ ಪತಿಯೊಡನೆ ವಸ್ತುಸ್ಥಿತಿಯನ್ನು ವಿವರಿಸಿದರು. ಶಾಸ್ತ್ರಿಗಳು, "ಅದಕ್ಕೆ ಚಿಂತಿಸುವುದೇಕೆ? ಈಗಿನ್ನೂ ಸಂಜೆ ಐದು ಗಂಟೆ. ನೀವು ಅಡುಗೆಮಾಡುವುದು ಏಳು ಗಂಟೆ ಹೊತ್ತಿಗೆ ತಾನೇ ಏನಾದರೂ ವ್ಯವಸ್ಥೆ ಆಗುತ್ತದೆ ಬಿಡು" ಎಂದು ಸಮಾಧಾನದಿಂದಲೇ ಹೇಳಿದರು. ಅದ್ಯಾವ ವ್ಯವಸ್ಥೆ ಹೇಗೆ ಆಗುತ್ತದೋ ಎಂದು ಅಕ್ಕಯ್ಯಮ್ಮ ಅಸಹಾಯಕರಾಗಿ ಚಿಂತಿಸುತ್ತಿದ್ದರು.

ಆರು ಗಂಟೆಯ ಹೊತ್ತಿಗೆ ಮನೆ ಬಾಗಿಲಿಗೆ ಒಂದು ಎತ್ತಿನ ಬಂಡಿ ಬಂದು ನಿಂತ ಸದ್ದು ಕೇಳಿತು. ಗಾಡಿಯಲ್ಲಿ ಬಂದವನು ಶಾಸ್ತ್ರಿಗಳಿಗೆ ಪರಿಚಯವಿದ್ದ ಒಬ್ಬ ವರ್ತಕ ಶೆಟ್ಟಿ. ಅವನು ಅದೇ ದಿನ ಬೆಳಗ್ಗೆ ಬಂದು ತನ್ನ ವ್ಯಾಪಾರ ವ್ಯವಹಾರಕ್ಕೆ ಸಂಬಂಧಿಸಿದ ಸಮಸ್ಯೆಗೆ ಪರಿಹಾರ ಕೇಳಿಕೊಂಡು ಹೋಗಿದ್ದ. ಶಾಸ್ತ್ರಿಗಳು ಸೂಚಿಸಿದ್ದ ಪರಿಹಾರವು ಆ ಸೆಟ್ಟಿಗೆ ಒಳ್ಳೆಯ ಲಾಭವನ್ನೇ ತಂದುಕೊಟ್ಟಿರಬೇಕು. ನರಹರಿ ಶಾಸ್ತ್ರಿಗಳು ತನ್ನಿಂದ ಹಣ ಕೇಳಿಕೊಳ್ಳುವವರಲ್ಲವೆಂದು ಸೆಟ್ಟಿಗೆ ತಿಳಿದಿತ್ತು. ಅವನು ಗಾಡಿಯ ತುಂಬ ಇಡೀ ತಿಂಗಳಿಗಾಗುವಷ್ಟು ದಿನಸಿ ಪದಾರ್ಥಗಳನ್ನು ಹೊತ್ತು ತಂದಿದ್ದ. ಎಲ್ಲವನ್ನೂ ಮನೆಯಲ್ಲಿ ಇಳಿಸಿ ಶಾಸ್ತ್ರಿಗಳಿಗೆ ಕೃತಜ್ಞತೆ ಸಲ್ಲಿಸಿ ಹೋದ ಮೇಲೆ ಶಾಸ್ತ್ರಿಗಳು ಪತ್ನಿಯನ್ನು ಕರೆದು, "ರಾತ್ರಿ ಅಡುಗೆಗೆ ಪದಾರ್ಥ ಇಲ್ಲ ಎನ್ನುತ್ತಿದ್ದೆಯಲ್ಲ, ನೋಡು, ಇವತ್ತು ಸಮಾರಾಧನೆ ಬೇಕಾದರೂ ಮಾಡಬಹುದು ಅಂತ ಕಾಣುತ್ತೆ" ಎಂದು ಮುಗುಳ್ನಕ್ಕರು.

ಮುಂದುವರೆಯುವುದು..




ಅದಮ್ಯಚೇತನದ 346 ನೇ ಹಸಿರು ಭಾನುವಾರದ ಅಂಗವಾಗಿ ಸ್ವಾತಂತ್ರ್ಯದ ಅಮೃತಮಹೋತ್ಸವದ ನೆನಪಿಗಾಗಿ 75 ಸಸಿಗಳನ್ನು ನೆಡುವ ಕಾರ್ಯಕ್ರಮವು ಅತ್ತಿಬೆಲೆ ಹೋಬಳಿಯ ಜಿಗಳ ಗ್ರಾಮದಲ್ಲಿ ನೆರವೇರಿತು.

ಸಸ್ಯಲೋಕ ಪರಿಚಯ ಮಾಲಿಕೆ- 11

# ಮನೆಯಂಗಳದಲ್ಲಿ ಇರಲೊಂದು ಇಂಗಳ ಗಿಡ



ಮನುಷ್ಯ ಪರಿಸರದಿಂದ ದೂರ ಸರಿದಷ್ಟೂ ಪರಿಸರದಲ್ಲಿನ ಅನೇಕ ಗಿಡ, ಮರ ಹಾಗೂ ಕಾಯಿಗಳ ಪರಿಚಯದಿಂದ ದೂರ ಉಳಿಯುತ್ತಿದ್ದಾನೆ. ಈಗ ಏಕೆ ದೂರ, ಹತ್ತಿರದ ಮಾತು ಎಂಬ ಪ್ರಶ್ನೆ ನಿಮ್ಮಲ್ಲಿ ಉದ್ಭವವಾಗಬಹುದು. ಆದರೆ ಇಂಗಳ ಗಿಡ/ಕಾಯಿಯ ಬಗ್ಗೆ ನಿಮಗೆ ಏನು ಗೊತ್ತಿದೆ? ಎಂಬ ಪ್ರಶ್ನೆಯನ್ನು ನಾವು ನಿಮಗೆ ಕೇಳಿದರೆ ಆಗ ದೂರದ ಮಾತಿನ ತಾತ್ಪರ್ಯ ಅರ್ಥವಾಗುತ್ತದೆ. ಹೌದು ಸ್ನೇಹಿತರೆ, ಇಂಗಳ ಕಾಯಿ ಅಥವಾ ಇಂಗುಡಿ ಕಾಯಿಯ ಬಗ್ಗೆ ಎಷ್ಟೋ ಜನರಿಗೆ ಗೊತ್ತಿಲ್ಲ. ಅಂತಹ ಅಪರೂಪದ ಇಂಗಳ ಕಾಯಿ ಪರಿಚಯವನ್ನು ಈ ಲೇಖನದಲ್ಲಿ ಮಾಡುತ್ತಿದ್ದೇನೆ.

ಗಿಡದಂತೆ ಕಾಣುವ ಇಂಗಳ ಮರವನ್ನು ಬಯಲು ಸೀಮೆಯಲ್ಲಿ ಹೆಚ್ಚಾಗಿ ಕಾಣಬಹುದು. Balanites roxburghii ಎಂಬ ವೈಜ್ಞಾನಿಕ ಹೆಸರಿನಿಂದ ಕರೆಯುವ ಈ ಗಿಡವು ಸೈಮಾರುಬೇಸಿ ಕುಟುಂಬಕ್ಕೆ ಸೇರಿದೆ. ಸುಮಾರು 20 ರಿಂದ 30 ಅಡಿ ಎತ್ತರ ಬೆಳೆಯುವ ಇಂಗಳವನ್ನು ಗಿಡ ಎನ್ನುವುದೂ ಕಷ್ಟ, ಇದು ಅತ್ತ ಮರವೂ ಅಲ್ಲ. ಈ ಗಿಡದ ಕಾಂಡವು ಬೂದು ಬಣ್ಣವಾಗಿದ್ದು ಇದು ಹಸ್ತರೂಪಿ ಸಂಯುಕ್ತ ಎಲೆಗಳನ್ನು ಹೊಂದಿದೆ.

ಇಂಗಳ ಗಿಡದಲ್ಲಿ ಬಿಡುವ ಕಾಯಿಯು ಸುವಾಸನೆಯಿಂದ ಕೂಡಿರುತ್ತದೆ. ಹೂ ಬಿಟ್ಟು ನಂತರ ಮೊಟ್ಟೆಯಾಕಾರವಾಗಿ ಕಾಯಿಯ ರೂಪ ಪಡೆಯುತ್ತದೆ. ಇದರ ಬೀಜವು 2.5 ರಿಂದ 3 ಸೆ.ಮೀ. ಉದ್ದ ಬೆಳೆಯುತ್ತದೆ. ಇಂಗಳ ಕಾಯಿಯ ಸಿಪ್ಪೆ ತೆಗೆದರೆ ಒಳಗಡೆ ಮೇಣದಂತಹ ತಿರುಳು ಇರುತ್ತದೆ. ಕಾಯಿಯು ಬಿರುಸಾಗಿದ್ದು ಮೊದಲು ಹಸಿರು ಬಣ್ಣದ ಕಾಯಿಗಳಾಗಿ ಒಣಗಿ ಹಳದಿ ಬಣ್ಣಕ್ಕೆ ತಿರುಗಿದ ಮೇಲೆ ಗಿಡದಿಂದ ಕೆಳಗೆ ಬೀಳುತ್ತದೆ.



ಉಷ್ಣ ಪ್ರದೇಶದಲ್ಲಿ ಹೆಚ್ಚಾಗಿ ಕಾಣಸಿಗುವ ಈ ಗಿಡವು ಗದಗ, ರಾಣೆಬೆನ್ನೂರು, ಹಾವೇರಿ, ಹುಬ್ಬಳ್ಳಿ ಸೇರಿದಂತೆ ಅನೇಕ ಕಡೆಗಳಲ್ಲಿ ಹೊಲದ ಬದುಗಳಲ್ಲಿ, ಗುಡ್ಡಗಾಡುಗಳಲ್ಲಿ ಬೆಳೆಯುತ್ತದೆ. ಇಂಗಳ ಹಣ್ಣಿನ ಒಳಗಿನ ತಿರುಳು ಔಷಧೀಯವಾಗಿ ಬಹು ಉಪಯುಕ್ತವಾಗಿದೆ. ಈ ಗಿಡವು ಬೀಜಗಳಿಂದ ಬೆಳೆಯುವುದಿಲ್ಲ. ಬದಲಾಗಿ, ಬೇರಿನ ತುಂಡುಗಳಿಂದ ತನ್ನ ವಂಶವನ್ನು ವೃದ್ಧಿಸಿಕೊಳ್ಳುತ್ತದೆ. ಮಳೆಗಾಲದಲ್ಲಿ ಮರದ ಸುತ್ತಮುತ್ತಲು ಸಸಿಗಳು ತನ್ನಿಂದ ತಾನೇ ಹುಟ್ಟಿಕೊಳ್ಳುತ್ತವೆ.

**ಇಂಗಳ ಕಾಯಿಯ ಉಪಯೋಗಗಳು:**

ಪ್ರಾಚೀನ ಕಾಲದಿಂದಲೂ ಈ ಇಂಗಳ ಕಾಯಿಯನ್ನು ಉಪ್ಪಿನ ಭರಣಿಗಳಲ್ಲಿ ಶೇಖರಿಸುವ ರೂಢಿಯಿತ್ತು. ಆದರೆ ಕಾಲ ಬದಲಾದಂತೆ ಇಂಗಳ ಕಾಯಿ ಅಡುಗೆ ಮನೆಯಿಂದ ದೂರ ಸರಿದಿದೆ. ಇಂಗಳ ಕಾಯಿಯ ಬಗ್ಗೆ ಗೊತ್ತಿದ್ದವರಿಗೂ ಇದರ ಉಪಯೋಗಗಳ ಪ್ರಯೋಜನ ತಿಳಿದಿರಕ್ಕಿಲ್ಲ.

• ಪ್ರತಿದಿನ ಇಂಗಳ ಕಾಯಿಯನ್ನು ಬಳಸುವುದರಿಂದ ಅನೇಕ ರೋಗಗಳಿಂದ ನಾವುಗಳು ದೂರ ಉಳಿಯಬಹುದು. ಸಾಮಾನ್ಯವಾಗಿ ಈ ಕಾಯಿಯನ್ನು ಉಪ್ಪಿನಲ್ಲಿ ಸಂರಕ್ಷಿಸಿ ನಂತರ ಬಳಸುವುದರಿಂದ ಗಂಟಲಿನ ರೋಗಗಳಾದ ಗಳಗಂಡ, ಟಾನ್ಸಿಲ್ ಹಾಗೂ ಥೈರಾಯ್ಡ್ ನಂತಹ ಸಮಸ್ಯೆಗಳು ಬರುವುದಿಲ್ಲ.

• ಇಂಗಳ ಗಿಡದ ಎಲೆಗಳನ್ನು ಕ್ಷಯ ರೋಗದ ಚಿಕಿತ್ಸೆಗೆ ಬಳಸುತ್ತಾರೆ. ಕಾಯಿಯ ಮೇಣವನ್ನು ಕಾಮಾಲೆ ರೋಗದ ಚಿಕಿತ್ಸೆಯಲ್ಲಿ ಬಳಕೆ ಮಾಡಲಾಗುತ್ತದೆ. ಹಾಗೂ ಕಾಯಿಯ ಸಿಪ್ಪೆ ತೆಗೆದು ಉಪ್ಪಿನ ಭರಣಿಯಲ್ಲಿಟ್ಟು, ಈ ಉಪ್ಪನ್ನು ಬಳಸುವುದರಿಂದ ಹೊಟ್ಟೆಯ ವಿವಿಧ ಬಾಧೆಗಳು ನಿವಾರಣೆಯಾಗುತ್ತವೆ.

• ಇಂಗಳಕಾಯಿಗಳಿಂದ ತೆಗೆದ ಎಣ್ಣೆಯನ್ನು ಗಾಯ, ಚರ್ಮ ರೋಗಗಳಲ್ಲಿ ಬಳಸಲಾಗುತ್ತದೆ. ಇದಕ್ಕೆ ಬ್ಯಾಕ್ಟೀರಿಯಾ ಹಾಗೂ ಶಿಲೀಂಧ್ರವನ್ನು ನಾಶ ಮಾಡುವ ಗುಣವಿದೆ. ಇದರ ಎಣ್ಣೆಯನ್ನು ಸುಟ್ಟಗಾಯಕ್ಕೂ ಬಳಸುತ್ತಾರೆ.

• ಹಣ್ಣಿನ ತಿರುಳನ್ನು ಮೇಕೆಯ ಹಾಲಿನೊಂದಿಗೆ ಸೇವಿಸಿದರೆ ನ್ಯುಮೋನಿಯ ರೋಗ ಗುಣಮುಖವಾಗುತ್ತದೆ. ಗರ್ಭಿಣಿಯರಿಗೆ ಸರಾಗವಾಗಿ ಹೆರಿಗೆಯಾಗಲೆಂದು ಇಂಗಳದ ಬೀಜದ ಪುಡಿಯನ್ನು ಕೊಡುತ್ತಾರೆ.

• ಬಟ್ಟೆಯ ಮೇಲಿನ ಕಲೆಗಳನ್ನು ಹೋಗಲಾಡಿಸಲು ಸಾಬೂನಿನಂತೆ ಮಾರ್ಜಕವಾಗಿ ಈ ಕಾಯಿಗಳನ್ನು ಹಿಂದಿನ ಕಾಲದಲ್ಲಿ ಬಳಸುತ್ತಿದ್ದರು. ಆದರೆ ಈಗ ಇದನ್ನು ಸಾಬೂನು ತಯಾರಿಕೆಯಲ್ಲಿ ಬಳಸುತ್ತಾರೆ.

• ಬಹುತೇಕ ಹಳ್ಳಿಗಳ ಅಡಿಗೆ ಮನೆಗಳಲ್ಲಿ ಇಂಗಳ ಮರದ ಕಾಂಡದಿಂದ ಕಡೆಗೋಲು, ಮುದ್ದೆ ತಯಾರಿಸುವ ಕೋಲು, ಲಟ್ಟಣಿಗೆ, ಮಣೆ, ಮಕ್ಕಳ ಆಟಿಕೆ ಮುಂತಾದವುಗಳನ್ನು ತಯಾರಿಸುತ್ತಾರೆ.



ಇಂಗಳ ಕಾಯಿಯ ಔಷಧೀಯ ಪ್ರಯೋಜನಗಳು ಅನೇಕ. ವೈದ್ಯಕೀಯ ವಿಜ್ಞಾನ ಮುಂದುವರಿದಿಲ್ಲದ ಕಾಲದಿಂದಲೂ ತಮ್ಮ ಅನುಭವದಿಂದ ಹಿರಿಯರು ಇಂತಹ ಅನೇಕ ಗಿಡ ಮರಗಳನ್ನು ಮನೆ ಮದ್ದುಗಳಲ್ಲಿ ಉಪಯೋಗ ಮಾಡುತ್ತಿದ್ದರು. ಇನ್ನೇಕೆ ತಡ... ಇಂದೇ ಇಂಗಳ ಕಾಯಿ ತಂದು ಉಪ್ಪಿನ ಡಬ್ಬದಲ್ಲಿ ಹಾಕಿಟ್ಟು, ಅದರಿಂದ ಪಿತ್ತ ಪ್ರಕೋಪ ಕಡಿಮೆ ಮಾಡಿಕೊಳ್ಳೋಣ. ಕೊನೆಯ ಮಾತು: ಸಾಧ್ಯವಾದರೆ, ಇದರ ಸಸಿಗಳನ್ನು ನಮ್ಮ ಹೊಲ, ತೋಟ, ಮನೆಯ ಆವರಣಗಳಲ್ಲಿ ನೆಟ್ಟು ಅಪರೂಪವಾಗುತ್ತಿರುವ ಈ ಮರದ ತಳಿಯನ್ನು ಉಳಿಸಿ ಬೆಳೆಸೋಣ. ●



ಛಾಯಾ ಓಕ್ ಬಾಪಟ್

ಪುಟ 3 ರಿಂದ

# ಎಥನಾಲ್ ಉತ್ಪಾದನೆ : ಭಾರತದ ಸಾಧನೆ

ಈ ಕುರಿತು ಈ ಕೆಳಗಿನ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

- ದೇಶೀಯವಾಗಿ ಎಥನಾಲ್/ಜೈವಿಕ ಇಂಧನಗಳ ಉತ್ಪಾದನೆಯನ್ನು ಹೆಚ್ಚಿಸಿ ಸರಬರಾಜು ಮಟ್ಟವನ್ನು ಕಾಯ್ದುಕೊಳ್ಳುವುದು
- ಎರಡನೇ ಪೀಳಿಗೆಯ ಜೈವಿಕ ಸಂಸ್ಕರಣಾಗಾರಗಳನ್ನು ಸ್ಥಾಪಿಸುವುದು.
- ಜೈವಿಕ ಇಂಧನಗಳ ಉತ್ಪಾದನೆಗೆ ಹೊಸ ಮೂಲಸಾಮಗ್ರಿಗಳ ಅಭಿವೃದ್ಧಿ
- ಜೈವಿಕ ಇಂಧನದ ಪರಿವರ್ತನೆಗೆ ಹೊಸ ವಿಧಾನಗಳ ಅನ್ವೇಷಣೆ
- ಜೈವಿಕ ಇಂಧನಕ್ಕೆ ಅನುಕೂಲಕರ ವಾತಾವರಣದ ನಿರ್ಮಾಣ ಮತ್ತು ಇಂಧನವನ್ನು ಮುಖ್ಯಧಾರೆಗೆ ತರುವುದು

### ಹೊಸ ಉತ್ಪಾದನಾ ವಿಧಾನಗಳು

ಕೇವಲ ಕಾಕಂಬಿಯನ್ನು ಬಳಸುವ ಹಳೆಯ ನೀತಿ ಮತ್ತು ಉತ್ಪಾದನಾ ವಿಧಾನಗಳನ್ನೇ ಮುಂದುವರಿಸಿದ್ದರೆ 260 ಕೋಟಿ ಲೀಟರ್ ಎಥನಾಲ್ ಕೊರತೆಯನ್ನು ದೇಶವು ಈ ವರ್ಷ ಎದುರಿಸಬೇಕಾಗುತ್ತಿತ್ತು. ಬಿ-ಕಾಕಂಬಿ, ಕಬ್ಬಿನ ರಸ, ಸಕ್ಕರೆ ಸಿರಪ್, ಮುಂತಾದವುಗಳಿಂದಲೂ ಎಥನಾಲ್ ಉತ್ಪಾದನೆಗೆ ಹೊಸ ಇಂಧನ ನೀತಿ ಅನುವು ಮಾಡಿಕೊಟ್ಟಿದೆ. ಜೊತೆಗೆ, ಸಕ್ಕರೆ ಬೀಟ್ (ಗಡ್ಡೆ), ಜೋಳ, ಮರಗೆಣಸು, ಕೊಳೆತ ಆಲೂಗಡ್ಡೆ, ಹೆಚ್ಚುವರಿ ಮತ್ತು ಉಪಯೋಗಕ್ಕೆ ಬರದ ಹಾಳುಬಿದ್ದ ಧಾನ್ಯಗಳು ಮುಂತಾದವುಗಳಿಂದಲೂ ಎಥನಾಲ್ ತಯಾರಿಸಬಹುದು. ಈ ಹೊಸ ನೀತಿಯು ಅತಿಉತ್ಪಾದನೆಯಿಂದ, ದೇಶೀಯ ಮತ್ತು ಅಂತಾರಾಷ್ಟ್ರೀಯ ದರಗಳಲ್ಲಿ ಕುಸಿತದಿಂದ ಸಂಕಷ್ಟಕ್ಕೀಡಾಗಿ ಸಾಲದ ಸುಳಿಯಲ್ಲಿ ನಲುಗುತ್ತಿರುವ ಸಕ್ಕರೆ ಉದ್ಯಮಕ್ಕೆ ವರದಾನವಾಗಿ ಪರಿಣಮಿಸಿದೆ. ಪ್ರತಿವರ್ಷ ಸುಮಾರು 60 ರಿಂದ 80 ಲಕ್ಷ ಮೆಟ್ರಿಕ್ ಟನ್ ಸಕ್ಕರೆಗೆ ಸಾವಿರಾರು ಕೋಟಿ ರೂಪಾಯಿ ಸಬ್ಸಿಡಿ ನೀಡಿ ರಫ್ತು ಮಾಡುತ್ತಿದ್ದ ಸರಕಾರದ ಹೊರೆ ಕಡಿಮೆಯಾಗಿದೆ.

ಇಂದು ಸಕ್ಕರೆ ಕಾರ್ಖಾನೆಗಳು ತಮ್ಮ ಸಾಮರ್ಥ್ಯದ ಗರಿಷ್ಠ ಮಟ್ಟದಲ್ಲಿ ಉತ್ಪಾದನೆ ಮಾಡುತ್ತಿವೆ, ಹೆಚ್ಚುವರಿ ಡಿಸ್ಟಿಲರಿಗಳನ್ನೂ ಸ್ಥಾಪಿಸಿಕೊಂಡಿವೆ. ಮೂಲಸಾಮಗ್ರಿಗಳ ಪಟ್ಟಿ ವಿಸ್ತಾರಗೊಂಡಿರುವ ಹಿನ್ನೆಲೆಯಲ್ಲಿ ನೂರಾರು ಜನ ಹೂಡಿಕೆದಾರರು ಸ್ವತಂತ್ರ ಡಿಸ್ಟಿಲರಿಗಳನ್ನು ಸ್ಥಾಪಿಸಿದ್ದಾರೆ. ಸರಕಾರದ ಹೊಸ ನೀತಿಯಿಂದಾಗಿ ಎಥನಾಲ್ ಪೂರೈಕೆಯಲ್ಲಿ ಹೆಚ್ಚಳ ಉಂಟಾಗಿರುವುದರಿಂದ ತೈಲೋದ್ಯಮಗಳೂ ಉತ್ಸಾಹದಿಂದ ಕೈಜೋಡಿಸಿ ನಿರ್ದೇಶಿತ ಗುರಿಯನ್ನು ನಿಗದಿತ ಅವಧಿಗಿಂತ ಏಳು ತಿಂಗಳು ಮುಂಚಿತವಾಗಿಯೇ ಸಾಧಿಸಲು ನೆರವಾಗಿವೆ. 2025ರ ಹೊತ್ತಿಗೆ ದೇಶದಲ್ಲಿ ಎಥನಾಲ್ ವಾರ್ಷಿಕ ಉತ್ಪಾದನೆ 1500 ಕೋಟಿ ಲೀಟರುಗಳಾಗುತ್ತದೆಯೆಂದು ಅಂದಾಜಿಸಲಾಗಿದೆ. ಈ ಕ್ಷೇತ್ರದಲ್ಲಿರುವ ಜನರ ಉತ್ಸಾಹವನ್ನು ಗಮನಿಸಿದ ಕೇಂದ್ರ ಸರಕಾರವು 2030ಕ್ಕೆ ನಿಗದಿಯಾಗಿರುವ ಶೇ 20 ಗುರಿಯನ್ನು 2025 ರೊಳಗೆ ಸಾಧಿಸುವ ಆಶಾಭಾವನೆ ಹೊಂದಿದೆ. ಶೇ. 10ರ ಗುರಿಯನ್ನು ಸಾಧಿಸಿರುವ ಭಾರತವು ಈ ಸಾಧನೆಯನ್ನು ಈಗಾಗಲೇ ಮಾಡಿರುವ ಅಮೆರಿಕ ಮತ್ತು ಬ್ರೆಜಿಲ್ ದೇಶಗಳ ಸಾಲಿಗೆ ಸೇರ್ಪಡೆಯಾಗಿದೆ.

### E – 100: ವಿದ್ಯುತ್ ಚಾಲಿತ ವಾಹನಗಳು

ಜೈವಿಕ ಇಂಧನ ಯೋಜನೆಯ ಜೊತೆಗೆ ಭಾರತವು ವಿದ್ಯುತ್ ಚಾಲಿತ ವಾಹನಗಳ ಕ್ಷೇತ್ರದಲ್ಲಿಯೂ ದಾಪುಗಾಲಿಟ್ಟಿದೆ. ಭಾರತೀಯ ಆಟೊಮೊಬೈಲ್ ತಯಾರಕರ ಸಂಸ್ಥೆಯ ಜೊತೆಗೆ E100 (ಶುದ್ಧ ಎಥನಾಲ್ ಬಳಸುವ) ದ್ವಿಚಕ್ರ, ತ್ರಿಚಕ್ರ ಮತ್ತು ಫ್ಲೆಕ್ಸಿ ವಾಹನಗಳ ತಯಾರಿಕೆಗೆ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಎಥನಾಲನ್ನು ವೈಮಾನಿಕ ಇಂಧನವನ್ನಾಗಿ ಬಳಸುವ ಪ್ರಯತ್ನಗಳೂ ನಡೆಯುತ್ತಿವೆ. ಡೀಸೆಲ್ ಜೊತೆಗೆ ಎಥನಾಲ್ ಮಿಶ್ರಣ ಮಾಡುವ ನಿಟ್ಟಿನಲ್ಲಿ ಹಲವಾರು ಪ್ರಯೋಗಗಳು ನಡೆಯುತ್ತಿವೆ. ಈ ಪ್ರಯತ್ನಗಳಿಗೆ ಯಶಸ್ಸು ದೊರೆಯುವ ದಿನ ಬಹಳ ದೂರವಿಲ್ಲ. ಆಗ ಎಥನಾಲಿನ ಬೇಡಿಕೆ ಹಲವು ಪಟ್ಟು ಹೆಚ್ಚಾಗುತ್ತದೆ. ಅಂತಹ ಸನ್ನಿವೇಶಕ್ಕೆ ಭಾರತ ಸಿದ್ಧವಾಗಿರಬೇಕಾಗುತ್ತದೆ. ಬದಲಿ ಮೂಲ ಸಾಮಗ್ರಿಗಳು

ಹೆಚ್ಚಾಗಲಿರುವ ಬೇಡಿಕೆಯನ್ನು ಈಡೇರಿಸಲು ಎಥನಾಲ್ ತಯಾರಿಕೆಗೆ ಕಾಕಂಬಿಯನ್ನು ಬಿಟ್ಟು ಬೇರೆ ಮೂಲವಸ್ತುಗಳನ್ನು ಹುಡುಕಿಕೊಳ್ಳಬೇಕಾಗುತ್ತದೆ. ಭಾರತದಲ್ಲಿ ಪ್ರತಿವರ್ಷ ಹತ್ತು ಪ್ರಮುಖ ಬೆಳೆಗಳಿಂದ ಸುಮಾರು ನೂರು ಕೋಟಿ ಟನ್ನುಗಳಷ್ಟು ತ್ಯಾಜ್ಯಶೇಷ ಉತ್ಪಾದನೆಯಾಗುತ್ತದೆ. ಅದರಲ್ಲಿ ಸುಮಾರು 20 ರಿಂದ 30 ಕೋಟಿ ಟನ್ ತ್ಯಾಜ್ಯವನ್ನು ರೈತರು ತಮ್ಮ ಜಮೀನುಗಳಲ್ಲಿ ಬೆಂಕಿಹಚ್ಚಿ ನಾಶ ಮಾಡುತ್ತಾರೆ. ಇದರಿಂದ ವಾತಾವರಣ ಕಲುಷಿತವಾಗುತ್ತದೆ. ಆದುದರಿಂದ ಈ ಕೃಷಿ ತ್ಯಾಜ್ಯಗಳನ್ನು ಎಥನಾಲ್ ಆಗಿ ಪರಿವರ್ತಿಸುವ ತಂತ್ರಜ್ಞಾನದ ಕಡೆಗೆ ಗಮನ ಹರಿಸಲಾಗುತ್ತಿದೆ. ಭಾರತವೂ ಸೇರಿದಂತೆ ಜಗತ್ತಿನ ಅನೇಕ ಕಡೆ ಈ ರೀತಿಯ ಪೈಲಟ್ ಯೋಜನೆಗಳು ನಡೆಯುತ್ತಿವೆ. ವಿದೇಶಗಳಲ್ಲಿ ಸ್ಥಾಪಿತವಾಗಿರುವ ಒಂದೆರಡು ಘಟಕಗಳು ಆರ್ಥಿಕವಾಗಿ ನಷ್ಟವನ್ನು ಅನುಭವಿಸುತ್ತಿದ್ದರೂ ಭಾರತವು ದಿಟ್ಟ ಹೆಜ್ಜೆಯನ್ನು ಮುಂದಿಟ್ಟು ಕೃಷಿ ತ್ಯಾಜ್ಯವನ್ನು ಎಥನಾಲ್ ತಯಾರಿಕೆಗೆ ಬಳಸಿಕೊಳ್ಳಲು ಮುಂದಾಗಿದೆ. ಈ ದಿಸೆಯಲ್ಲಿ ಪೆಟ್ರೋಲಿಯಂ ಸಚಿವಾಲಯವು ಸರಕಾರಿ ಒಡೆತನದ ಸಾರ್ವಜನಿಕ ಉದ್ದಿಮೆಗಳಿಗೆ 12 ಜೈವಿಕ ಸಂಸ್ಕರಣ ಸ್ಥಾವರಗಳನ್ನು ಸ್ಥಾಪಿಸಲು ಆದೇಶ ನೀಡಿದೆ. ಅವುಗಳಲ್ಲಿ ನಾಲ್ಕು ಸ್ಥಾವರಗಳು ಕೆಲವೇ ತಿಂಗಳುಗಳಲ್ಲಿ ಕಾರ್ಯಾರಂಭ ಮಾಡಲಿವೆ. ಈ ಪ್ರತಿಯೊಂದು ಸ್ಥಾವರವೂ ಪ್ರತಿದಿನ ಸುಮಾರು 500/1000 ಟನ್ ತ್ಯಾಜ್ಯವನ್ನು ಬಳಸಿ ಸುಮಾರು ಒಂದರಿಂದ ಎರಡು ಲಕ್ಷ ಲೀಟರ್ ಎಥನಾಲ್, ಜೊತೆಗೆ ಲಿಗ್ನಿನ್ ಮತ್ತು ಜೈವಿಕ ಅನಿಲಗಳನ್ನು ಉತ್ಪಾದಿಸಲಿವೆ.

### ಭವಿಷ್ಯದ ಇಂಧನ

ಹೀಗೆ ಉತ್ಪನ್ನವಾಗುವ ಲಿಗ್ನೋ ಸೆಲ್ಯುಲೋಸಿಕ್ ಎಥನಾಲ್ ಭವಿಷ್ಯದ ಇಂಧನವಾಗಿರುವುದರ ಜೊತೆಗೆ ಪರಿಸರ ಮಾಲಿನ್ಯದ ನಿವಾರಣೆಗೂ ಸಹಾಯ ಮಾಡುತ್ತದೆ. ರೈತರಿಗೆ ಹೆಚ್ಚುವರಿ ಆದಾಯದ ಮೂಲವಾಗುವ ಕೃಷಿತ್ಯಾಜ್ಯದ ಸಂಗ್ರಹಣೆ, ಸಾಗಾಟ ಮುಂತಾದ ಕ್ಷೇತ್ರಗಳಲ್ಲಿ ಉದ್ಯೋಗಸೃಷ್ಟಿಯೂ ಆಗುತ್ತದೆ. ಇವೆಲ್ಲವನ್ನೂ ಸಾಧಿಸಲು ಸರಕಾರವು ಉತ್ಪಾದನೆಯಾಗುವ ಅಷ್ಟೂ ಎಥನಾಲನ್ನು ಕೊಳ್ಳುವ ವಾಗ್ದಾನ, ಹೊಸ ಬೆಲೆ ನಿರ್ಧಾರಣ ನೀತಿ, ಸ್ಥಾವರಗಳ ಸ್ಥಾಪನೆಗೆ ತಗಲುವ ಅಗಾಧ ವೆಚ್ಚವನ್ನು ಭರಿಸಲು 1900 ಕೋಟಿ ರೂಪಾಯಿಗಳ ಪಿಎಂ – ಜೀವನ್ ಯೋಜನಾ ನಿಧಿ, ಬ್ಯಾಂಕುಗಳ ಮೂಲಕ ಕಡಿಮೆ ಬಡ್ಡಿದರದ ಸಾಲದ ವ್ಯವಸ್ಥೆ, ಪರಿವರ್ತನಾ ತಂತ್ರಜ್ಞಾನಗಳ ಸಂಶೋಧನೆಗೆ ಪ್ರೋತ್ಸಾಹ, ಮುಂತಾದ ಅನೇಕ ಉಪಕ್ರಮಗಳನ್ನು ರಾಷ್ಟ್ರೀಯ ನೀತಿಯಲ್ಲಿ ಅಳವಡಿಸಿಕೊಂಡಿದೆ.



ಜೈವಿಕ ಇಂಧನದ ಕುರಿತು ಸರಕಾರವು ಬದ್ಧತೆಯಿಂದ ಮುಂದಡಿಯಿಟ್ಟಿದೆ. ಇಂಧನ ಸ್ವಾವಲಂಬನೆ, ಗ್ರಾಮೀಣ ಆರ್ಥಿಕತೆಯ ಪುನಶ್ಚೇತನ, ರೈತರ ಆದಾಯ ವೃದ್ಧಿ, ಉದ್ಯೋಗ ಸೃಷ್ಟಿ, ಪರಿಸರ ನೈರ್ಮಲ್ಯ, ಮುಂತಾದ ಹಲವು ಪ್ರಯೋಜನಗಳನ್ನು ಏಕಕಾಲಕ್ಕೆ ನೀಡುವ ಈ ಯೋಜನೆಯು ಆತ್ಮನಿರ್ಭರ ಭಾರತ, ಮೇಕ್ ಇನ್ ಇಂಡಿಯಾ ಮತ್ತು ನೆಟ್ ಝೀರೋ ಉಪಕ್ರಮಗಳ ನಿಟ್ಟಿನಲ್ಲಿ ದೊಡ್ಡ ಹೆಜ್ಜೆಯಾಗಿದೆ.

**ಸಂಗ್ರಹಾನುವಾದ: ಕೆ. ಜನಾರ್ದನ ತುಂಗ** ●

ವ್ಯಕ್ತಿ ವಿಶೇಷ ಮಾಲಿಕೆ

# ಆಧುನಿಕ ಜ್ಯೋತಿಷದ ಜನಕ – ಡಾ. ಬಿ ವಿ ರಾಮನ್

ಎಪ್ಪತ್ತೈದು ವರ್ಷಗಳ ಹಿಂದೆ 1947ರ ಆಗಸ್ಟ್ ಹದಿನೈದನೆಯ ದಿನಾಂಕದಂದು ಭಾರತಕ್ಕೆ ಸ್ವಾತಂತ್ರ್ಯವನ್ನು ನೀಡಲು ಬ್ರಿಟಿಷ್ ಕ್ಯಾಬಿನೆಟ್ ನಿರ್ಧರಿಸಿತು. ಆದರೆ, ಈ ದಿನಾಂಕದ ಕುರಿತು ಭಾರತೀಯ ನಾಯಕರು ಚಿಂತಾಕ್ರಾಂತರಾಗಿದ್ದರು. ಕಾರಣ, ಜುಲೈ 31, 1947ರಂದು ಅತ್ಯಂತ ಅಶುಭದಿನ ಎಂದು ಸುದ್ದಿಸಂಸ್ಥೆಯೊಂದು ವರದಿ ಮಾಡಿತ್ತು. ಹೀಗಿದ್ದರೂ ರಾಜಕೀಯ ಕಾರಣಗಳಿಗಾಗಿ ಬ್ರಿಟಿಷರು ಈ ದಿನಾಂಕವನ್ನು ಬದಲಿಸಲು ಸಿದ್ಧರಿರಲಿಲ್ಲ. ಹೀಗಾಗಿ ಭಾರತದ ಹಿರಿಯ ನಾಯಕರೆಲ್ಲರೂ ಬೆಂಗಳೂರಿನಲ್ಲಿ ವಾಸವಾಗಿದ್ದ ಪ್ರಸಿದ್ಧ ಜ್ಯೋತಿಷಿಯೊಬ್ಬರ ಸಲಹೆ ಕೇಳಿದರು. ಅವರು ಲೆಕ್ಕಾಚಾರ ಮಾಡಿ "ರವಿ, ಚಂದ್ರ, ಬುಧ, ಗುರು ಮತ್ತು ಶುಕ್ರ ಈ ಎಲ್ಲ ಗ್ರಹಗಳೂ ಕರ್ಕಾಟಕ ರಾಶಿಯಲ್ಲಿರುವುದು ಶುಭ ಸಂಕೇತವಲ್ಲ. ಆದರೆ, ಅನಿವಾರ್ಯವಾದರೆ 14 ಮತ್ತು15ರ ನಡುವಣ ಮಧ್ಯರಾತ್ರಿಯಲ್ಲಿ ಭಾರತದ ಮೊದಲ ಸಂಪುಟ ಪ್ರಮಾಣ ವಚನ ಸ್ವೀಕರಿಸಿದರೆ ಪ್ರಾರಂಭದಲ್ಲಿ ಕಷ್ಟಗಳನ್ನು ಎದುರಿಸಿದರೂ ನಂತರ ದೇಶವು ಉಚ್ಛ್ರಾಯಸ್ಥಿತಿಯನ್ನು ತಲುಪುತ್ತದೆ" ಎಂದು ಅಭಿಪ್ರಾಯ ನೀಡಿದರು. ಅದರಂತೆ ಮಧ್ಯರಾತ್ರಿಯಲ್ಲಿಯೇ ಅಧಿಕಾರ ಹಸ್ತಾಂತರದ ಪ್ರಕ್ರಿಯೆ ನಡೆಯಿತು.

ಈ ರೀತಿಯಾಗಿ ಮುಹೂರ್ತ ನಿರ್ಣಯಿಸಿಕೊಟ್ಟವರು ವಿಶ್ವಪ್ರಸಿದ್ಧ ಜ್ಯೋತಿಷಿ, ಡಾ. ಬೆಂಗಳೂರು ವೆಂಕಟರಮಣ, ಅಲಿಯಾಸ್, ಡಾ. ಬಿ ವಿ ರಾಮನ್. ಈ ನಿರ್ಣಯದ ಪರಿಣಾಮ ಎಲ್ಲರ ಕಣ್ಣೆದುರಿನಲ್ಲಿದೆ. ಜ್ಯೋತಿಷಿಗಳ ಅಭಿಪ್ರಾಯವನ್ನು ನಿರ್ಲಕ್ಷಿಸಿದ ಪಾಕಿಸ್ತಾನದ ಸ್ಥಿತಿ ಏನಾಗಿದೆಯೆಂಬುದೂ ಎಲ್ಲರಿಗೆ ತಿಳಿದಿದೆ.

ರಾಮನ್ ಹುಟ್ಟಿದ್ದು 08/08/1912ರಂದು, ಬೆಂಗಳೂರಿಗೆ ಸಮೀಪದ ಹುಣಸಮಾರನ ಹಳ್ಳಿಯಲ್ಲಿ. ಬಾಲ್ಯದ ಹೆಸರು, ವೆಂಕಟರಮಣ. ತಂದೆ ನಂಜುಂಡ ರಾವ್ ಮತ್ತು ತಾಯಿ ರಾಮಕ್ಕ. ವೇದ, ಜ್ಯೋತಿಷ, ನ್ಯಾಯಶಾಸ್ತ್ರ, ಇತಿಹಾಸ ಮತ್ತಿತರ ವಿಷಯಗಳಲ್ಲಿ ಪಾರಂಗತರಾಗಿದ್ದ ಪ್ರೊ|| ಸೂರ್ಯನಾರಾಯಣ ರಾಯರು ಇವರ ತಾತ.

ವೆಂಕಟರಮಣ ತೀರ ಚಿಕ್ಕವರಿದ್ದಾಗಲೇ ತಾತ ಅವರನ್ನು ಕರೆದು ಸೂರ್ಯ ಸಿದ್ಧಾಂತ ಮತ್ತು ಬೃಹಜ್ಜಾತಕದ ಎರಡು ಶ್ಲೋಕಗಳನ್ನು ಪಠಿಸಿ ಅದನ್ನು ಪುನರುಚ್ಚರಿಸುವಂತೆ ಆದೇಶಿಸಿದರು. ಇದೇ ಅವರ ಜ್ಯೋತಿಶ್ಶಾಸ್ತ್ರದ ಪ್ರಥಮ ಪಾಠ. ಸಂಪ್ರದಾಯದಂತೆ ಎಂಟು ವರ್ಷಕ್ಕೆ ಉಪನಯನ, ವೇದಾಧ್ಯಯನದ ಪ್ರಾರಂಭ. ಮಗುವಾಗಿದ್ದಾಗಲೇ ತಾಯಿಯನ್ನು ಕಳೆದುಕೊಂಡ ವೆಂಕಟರಮಣ, ತಾತನ ಮಾರ್ಗದರ್ಶನದಲ್ಲಿ ಬೆಳೆದರು. 13 ವರ್ಷಕ್ಕೆ ಜ್ಯೋತಿಶ್ಶಾಸ್ತ್ರವನ್ನು ಕರಗತಮಾಡಿಕೊಂಡ ಆತ್ಮವಿಶ್ವಾಸದಲ್ಲಿ ಮೊದಲು ವಿಶ್ಲೇಷಣೆ ಮಾಡಿದ್ದು ತನ್ನ ಮತ್ತು ತಾತನ ಜಾತಕಗಳನ್ನು. ಮೈಸೂರರಸರಿಂದಲೇ ಗೌರವಿಸಲ್ಪಡುತ್ತಿದ್ದ ತಾತನನ್ನು ಭೇಟಿಯಾಗಲು ಬರುತ್ತಿದ್ದ ಗಣ್ಯರ ಜಾತಕಗಳನ್ನು ವೆಂಕಟರಮಣರೇ ತಯಾರಿಸುತ್ತಿದ್ದರು.

ರಾಮನ್ ಹದಿನೆಂಟು ವರ್ಷವಾಗುವ ಹೊತ್ತಿಗೆ ತನ್ನ ಅತ್ತೆಯ ಮಗಳು, ರಾಜೇಶ್ವರಿಯೊಂದಿಗೆ ವಿವಾಹವಾದರು. ವೈದ್ಯರಾಗಿದ್ದ ಮಾವನ ಆಗ್ರಹದಂತೆ ರಾಮನ್ ರಸಾಯನಶಾಸ್ತ್ರ, ಸಸ್ಯಶಾಸ್ತ್ರ ಮತ್ತು ಜೀವಶಾಸ್ತ್ರಗಳಲ್ಲಿ ಪದವಿ ಪಡೆಯಲು ನೋಂದಾಯಿಸಿಕೊಂಡರು. ಆದರೆ ಜೀವಶಾಸ್ತ್ರದ ತರಗತಿಯಲ್ಲಿ ಒಂದು ಎರೆಹುಳುವನ್ನು ಛೇದಿಸಬೇಕಾಗಿ ಬಂದಾಗ ಸಾಧ್ಯವಾಗದೆ ಕಾಲೇಜನ್ನೇ ತ್ಯಜಿಸಿದರು. ನಂತರ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಿಂದ ಪದವಿ ಪಡೆದರು. ಅದಾಗಲೇ ಗಾಂಧಿವಾದಿಯಾಗಿ ಬದಲಾಗಿದ್ದ ವೆಂಕಟರಮಣ, ಊರಿನಲ್ಲಿ ನವರಾತ್ರಿಯ ಕಾಲದಲ್ಲಿ ಪ್ರಾಣಿಬಲಿ ಕೊಡುವ ಪದ್ಧತಿಯನ್ನು ನಿಲ್ಲಿಸಿದ್ದರು.

ಅತೀವ ಸ್ವಾಭಿಮಾನಿಯಾಗಿದ್ದ ವೆಂಕಟರಮಣ ಯಾವುದೇ ಸರಕಾರಿ ಉದ್ಯೋಗವನ್ನು ಬಯಸದೆ ಜ್ಯೋತಿಷ್ಯಕ್ಕೆ ತಮ್ಮ ಜೀವನವನ್ನು ಮುಡಿಪಾಗಿಡಲು ನಿರ್ಧರಿಸಿದರು. ಸೂರ್ಯಸಿದ್ಧಾಂತದಲ್ಲಿ ಅಪಾರ ಪರಿಣತಿಯನ್ನು ಪಡೆದರು. ಸೂರ್ಯಗ್ರಹಣದ ವಿಚಾರದಲ್ಲಿ ಒಂದು ವರ್ಷ ಪಂಚಾಂಗಕರ್ತೃಗಳು ಮಾಡಿದ್ದ ತಪ್ಪನ್ನು ತೋರಿಸಿ ತಮ್ಮ ಪಾರಮ್ಯವನ್ನು ಸಾಬೀತುಪಡಿಸಿದರು. ಆದರೆ, ಮನೆಯ ಆರ್ಥಿಕ ಸಂಕಷ್ಟಗಳ ಹಿನ್ನೆಲೆಯಲ್ಲಿ ಹೆಚ್ಚಿನ ಹಣ ಸಂಪಾದನೆ ಅನಿವಾರ್ಯವಾದಾಗ ಮುಂಬಯಿಗೆ ತೆರಳಿದರು. ಜೊತೆಗೆ, ತಾತ ಪ್ರಾರಂಭಿಸಿ ಕೈಬಿಟ್ಟಿದ್ದ ಆಸ್ಟ್ರಲಾಜಿಕಲ್ ಮ್ಯಾಗಜೀನ್ ಪತ್ರಿಕೆಯನ್ನು ಪುನರಾರಂಭಿಸುವ ಸಂಕಲ್ಪ ಅವರಲ್ಲಿತ್ತು. ಮುಂಬಯಿಯಲ್ಲಿ ಅವರ ನಿರೀಕ್ಷೆ ಈಡೇರದಿದ್ದಾಗ ಮದ್ರಾಸಿಗೆ ತೆರಳಿದರು. ಅಲ್ಲಿ ಅನೇಕ ಹಿರಿಯ ವಿದ್ವಾಂಸರ ಸಹವಾಸ ಅವರಿಗೆ ದೊರೆಯಿತು. ಒಮ್ಮೆ ಹಿಂದೂ ಪತ್ರಿಕೆಯ ಕಸ್ತೂರಿ ಶ್ರೀನಿವಾಸನ್ ರನ್ನು ಭೇಟಿಯಾಗಿ ಜ್ಯೋತಿಶ್ಶಾಸ್ತ್ರಕ್ಕೇ ಮೀಸಲಾದ ಪತ್ರಿಕೆಯನ್ನು ಪ್ರಾರಂಭಿಸುವ ಮನದಾಸೆ ತೋಡಿಕೊಂಡರು. ಅವರು ನೀಡಿದ ನೂರು ರೂಪಾಯಿಗಳನ್ನು ಹಿಡಿದುಕೊಂಡು ಬೆಂಗಳೂರಿಗೆ ಮರಳಿದರು. ತಮ್ಮ ಹೆಸರನ್ನು ಬೆಂಗಳೂರು ವೆಂಕಟ ರಾಮನ್, ಬಿ. ವಿ. ರಾಮನ್ ಎಂದು ಬದಲಾಯಿಸಿಕೊಂಡು "ದಿ ಆಸ್ಟ್ರಲಾಜಿಕಲ್ ಮ್ಯಾಗಜೀನ್" ತ್ರೈಮಾಸಿಕ ಪತ್ರಿಕೆಯನ್ನು 1936ರಲ್ಲಿ ಪ್ರಾರಂಭಿಸಿಬಿಟ್ಟರು.



ಬಾಲ್ಯದಲ್ಲಿಯೇ ಶೃಂಗೇರಿಯ ಶ್ರೀ ಶ್ರೀ ಚಂದ್ರಶೇಖರ ಭಾರತಿಯವರ ಕೃಪಾಕಟಾಕ್ಷವನ್ನು ಪಡೆದಿದ್ದ ಬಿ. ವಿ. ರಾಮನ್ನರಿಗೆ ಅರುಣಾಚಲದ ರಮಣ ಮಹರ್ಷಿಗಳ ಆಶೀರ್ವಾದವೂ ದೊರೆಯಿತು. ಅಲ್ಲಿಂದ ಅವರು ಜ್ಯೋತಿಷ ಜಗತ್ತಿನ ತ್ರಿವಿಕ್ರಮನಾಗಿ ಬೆಳೆದರು. ಜಗತ್ತಿನ ಆಗುಹೋಗುಗಳನ್ನು ತಮ್ಮ ಪತ್ರಿಕೆಯಲ್ಲಿ ಗಣಿತೀಯ ಜ್ಯೋತಿಶ್ಶಾಸ್ತ್ರದ ನೆಲೆಯಲ್ಲಿ ಲೆಕ್ಕಾಚಾರ ಮಾಡಿ ಪ್ರಕಟಿಸಲು ಪ್ರಾರಂಭಿಸಿದರು. ಅವರ ಭವಿಷ್ಯವಾಣಿಯ ನಿಖರತೆ ಇಡೀ ಜಗತ್ತನ್ನು ಸೆಳೆಯತೊಡಗಿತು. 1938ರಲ್ಲಿ ಅವರು World Prospects in 1939 and 1940 ಎಂಬ ಕಿರುಪುಸ್ತಿಕೆ ಪ್ರಕಟಿಸಿದರು. ಅದರಲ್ಲಿ ಯೂರೋಪಿನ ಎಲ್ಲ ದೇಶಗಳಲ್ಲಿ ನಡೆಯುವ ಸ್ಥಿತ್ಯಂತರಗಳನ್ನೂ ರಾಜಕೀಯ ಹತ್ಯೆಗಳನ್ನೂ ಪ್ರಸ್ತಾಪಿಸಿದ್ದರು. ಅವರು ಪ್ರಸ್ತಾಪಿಸಿದಂತೆ 1939ರ ಸೆಪ್ಟೆಂಬರ್ ಒಂದರಂದು ಜರ್ಮನಿ ಪೋಲೇಂಡನ್ನು ಆಕ್ರಮಿಸಿಕೊಂಡಿತು. ಎರಡನೇ ವಿಶ್ವಯುದ್ಧ ಪ್ರಾರಂಭವಾಯಿತು. ಎಲ್ಲ ಘಟನೆಗಳೂ ಪುಸ್ತಕದಲ್ಲಿ ವಿವರಿಸಿದಂತೆಯೇ ನಡೆದಿದ್ದವು. ಇದರಿಂದ ರಾಮನ್ ವಿಶ್ವಖ್ಯಾತಿ ಗಳಿಸಿದರು. ವಿಶ್ವಯುದ್ಧದ ಮುಂದಿನ ಬೆಳವಣಿಗೆಗಳನ್ನು ಅರಿಯಲು ಬ್ರಿಟಿಷ್ ರೆಸಿಡೆಂಟರೇ ಅವರ ಬೆಂಗಳೂರಿನ ಮನೆಗೆ ಬಂದರು. ಗಾಂಧೀಜಿಯವರ ಹತ್ಯೆಯ ಮುನ್ಸೂಚನೆಯನ್ನೂ ರಾಮನ್ ನಿಖರವಾಗಿ ನೀಡಿದ್ದರು. ಆದರೆ ಆಳುವ ವರ್ಗದ ನಿರ್ಲಕ್ಷ್ಯದಿಂದ ಗಾಂಧೀಜಿಯ ಹತ್ಯೆ ನಡೆದೇ ಹೋಯಿತು.

ಅವರ ಮುಂದಿನ ಪುಸ್ತಕ, The Next Five Years ಕೂಡ ಅಷ್ಟೇ ಜನಪ್ರಿಯವಾಯಿತು. ಬೆಂಗಳೂರಿನ ರಾಷ್ಟ್ರೀಯ ವೈಮಾನಿಕ ಪ್ರಯೋಗಾಲಯದ ಶಂಕುಸ್ಥಾಪನೆ, ಶರಾವತಿ ಅಣೆಕಟ್ಟಿನ ನಿರ್ಮಾಣ, ಅಸೋಸಿಯೇಟೆಡ್ ಪ್ರೆಸ್ ಹಸ್ತಾಂತರ ಮುಂತಾದ ಪ್ರಮುಖ ಘಟನೆಗಳಿಗೆ ರಾಮನ್ನರೇ ಮುಹೂರ್ತ ನಿಗದಿ ಮಾಡಿಕೊಟ್ಟಿದ್ದರು.

ರಾಮನ್ 1959ರಲ್ಲಿ ನ್ಯೂಯಾರ್ಕಿನಲ್ಲಿ ನಡೆದ ಅಂತಾರಾಷ್ಟ್ರೀಯ ಜ್ಯೋತಿಶ್ಶಾಸ್ತ್ರ ಸಮ್ಮೇಳನದಲ್ಲಿ ಅವರು ಜ್ಯೋತಿಶ್ಶಾಸ್ತ್ರಕ್ಕೆ ಭಾರತದ ಕೊಡುಗೆಯನ್ನು ಕುರಿತು ಭಾಷಣ ಮಾಡಿ ಅಪಾರ ಮೆಚ್ಚುಗೆ ಗಳಿಸಿದರು. ಅಕ್ಟೋಬರ್ 9, 1970ರಲ್ಲಿ ನ್ಯೂಯಾರ್ಕಿನಲ್ಲಿ ವಿಶ್ವಸಂಸ್ಥೆಯ ಆಶ್ರಯದಲ್ಲೂ ಅಮೆರಿಕ, ಭಾರತ ಮತ್ತು ಯೂರೋಪಿನ ಅನೇಕ ವಿಶ್ವವಿದ್ಯಾಲಯಗಳಲ್ಲೂ ಉಪನ್ಯಾಸ ನೀಡಿದರು.

ಜ್ಯೋತಿಶ್ಶಾಸ್ತ್ರದ ಅಧ್ಯಯನವನ್ನು ನಿಯಮಿತಗೊಳಿಸಲು ರಾಮನ್ನರು 1983ರಲ್ಲಿ ಇಂಡಿಯನ್ ಕೌನ್ಸಿಲ್ ಆಫ್ ಆಸ್ಟ್ರಲಾಜಿಕಲ್ ಸೈನ್ಸಸ್ ಸಂಸ್ಥೆಯನ್ನು ಪ್ರಾರಂಭಿಸಿದರು. ಭಾರತೀಯ ಜ್ಯೋತಿಶ್ಶಾಸ್ತ್ರವನ್ನು ವಿಶ್ವಕ್ಕೆ ಪರಿಚಯಿಸಿದ ರಾಮನ್ನರಿಗೆ 1968ರಲ್ಲಿ ಅಖಿಲಭಾರತೀಯ ಸಂಸ್ಕೃತ ಸಮ್ಮೇಳನದಲ್ಲಿ ಸನ್ಮಾನ ಸಂದಿತು. 1976ರಲ್ಲಿ ಕುಮಾಂವ್ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ನೀಡಿ ಸನ್ಮಾನಿಸಿತು

62 ವರ್ಷಗಳಷ್ಟು ಸುದೀರ್ಘಕಾಲ ದಿ ಆಸ್ಟ್ರಲಾಜಿಕಲ್ ಮ್ಯಾಗಜೀನ್ ಪತ್ರಿಕೆಯನ್ನು ನಿರಂತರವಾಗಿ ಪ್ರಕಟಿಸಿದ ರಾಮನ್ ನೂರಾರು ಲೇಖನಗಳನ್ನೂ, ಹಲವಾರು ಪುಸ್ತಕಗಳನ್ನೂ ಬರೆದಿದ್ದಾರೆ. ಅಭಿನವ ವರಾಹ ಮಿಹಿರ, ಜ್ಯೋತಿಷ ಭಾನು, ಜ್ಯೋತಿಷ ರತ್ನ, ಅಭಿನವ ಭಾಸ್ಕರ, ಮುಂತಾದ ಬಿರುದುಗಳನ್ನು ಪಡೆದ ಇವರು ಭಾರತೀಯ ಜ್ಯೋತಿಷದ ಜನಕ ಎಂದೂ ಕರೆಯಿಸಿಕೊಂಡಿದ್ದಾರೆ. ಭಾರತೀಯ ಜ್ಯೋತಿಶ್ಶಾಸ್ತ್ರಕ್ಕೆ ವಿಶ್ವ ಮನ್ನಣೆ ಗಳಿಸಿಕೊಟ್ಟ ರಾಮನ್, ದಿನಾಂಕ 20/12/1998ರಂದು ಬೆಂಗಳೂರಿನಲ್ಲಿ ನಿಧನರಾದರು. ●

-ಕೆ.ಜನಾರ್ದನ ತುಂಗ

# ಅದಮ್ಯಚೇತನ ತಿಂಗಳ ವರದಿ (15 ಜುಲೈ 2022 ರಿಂದ 15 ಆಗಸ್ಟ್ 2022)

**ಅನಂತ ಪ್ರೇರಣಾ ಕೇಂದ್ರಕ್ಕೆ ವಿದ್ಯಾರ್ಥಿಗಳ ಭೇಟಿ**

ಅನಂತ ಪ್ರೇರಣಾ ಕೇಂದ್ರಕ್ಕೆ ಬಿಸಿಯೂಟದ ಶಾಲೆಗಳಾದ ಶ್ರೀ ಸಿದ್ಧಾರ್ಥ ವಸತಿ ಪ್ರೌಢಶಾಲೆ, ಬಾಪೂಜಿನಗರ, ಸ್ವಾಮಿ ವಿವೇಕಾನಂದ ಹೈಸ್ಕೂಲ್, ವಿಮೆನ್ಸ್ ಪೀಸ್ ಲೀಗ್ ಹೈಸ್ಕೂಲ್, ನರೇಂದ್ರ ಹೈಸ್ಕೂಲ್, ಆರ್.ಎಸ್.ಪಿ.ಎ. ವಿದ್ಯಾಕೇಂದ್ರ, ಡಿ.ಎಂ.ಎಂ. ಹೈಸ್ಕೂಲ್, ದೊಮ್ಮಸಂದ್ರ, ಕ್ರೆಸೆಂಟ್ ಪಬ್ಲಿಕ್ ಹೈಸ್ಕೂಲ್ ಬಸವನಗುಡಿ, ಸೇರಿದಂತೆ ಬೆಂಗಳೂರಿನ ವಿವಿಧ ಶಾಲಾ ಮಕ್ಕಳು ಅನಂತ ಪ್ರೇರಣಾ ಕೇಂದ್ರಕ್ಕೆ ಭೇಟಿ ನೀಡಿ ಅನಂತಕುಮಾರ್ ಅವರ ಜೀವನದ ಹಾಗೂ ಮೈಕ್ರೋ ಪ್ಲಾಸ್ಟಿಕ್‌ನಿಂದ ಪರಿಸರ ಮೇಲೆ ಉಂಟಾಗುತ್ತಿರುವ ಪರಿಣಾಮಗಳ ಬಗ್ಗೆ ಅರಿವು ಮೂಡಿಸಿಕೊಂಡರು. ಕೇಂದ್ರಕ್ಕೆ ಭೇಟಿ ನೀಡಿದ ಎಲ್ಲ ಮಕ್ಕಳಿಗೆ ಅನಂತ ಪ್ರೇರಣಾ ಕೇಂದ್ರದ ಕುರಿತು ಪ್ರಬಂಧ ಬರೆಯಲು ಸೂಚನೆ ನೀಡಲಾಯಿತು. ಶಾಲಾ ಮಕ್ಕಳಿಗೆ ಭೋಜನ ವ್ಯವಸ್ಥೆಯನ್ನು ಅದಮ್ಯ ಚೇತನದಿಂದ ಏರ್ಪಡಿಸಲಾಗಿತ್ತು.

**ಗಣ್ಯರ ಭೇಟಿ**

ರಾಷ್ಟ್ರೀಯಸ್ವಯಂಸೇವಕ ಸಂಘದ ಪರ್ಯಾವರಣ ಸಂರಕ್ಷಣಾ ಗತಿವಿಧಿ ಯ ರಾಷ್ಟ್ರೀಯ ಪದಾಧಿಕಾರಿಗಳು ಅದಮ್ಯ ಚೇತನಕ್ಕೆ ಭೇಟಿ ನೀಡಿ ಬಿಸಿಯೂಟ, ಹಸಿರು ಭಾನುವಾರ, ಪಳೆಯುಳಿಕೆರಹಿತ ಇಂಧನ, ಕಸರಹಿತ ಅಡುಗೆಮನೆಯ ಬಗ್ಗೆ ಮಾಹಿತಿ ಪಡೆದರು. ತೇಜಸ್ವಿನಿ ಅನಂತಕುಮಾರ್ ವಿವರಣೆ ನೀಡಿದರು.

ತಜ್ಞ ಮೌಲ್ಯಮಾಪನ ಸಮಿತಿಯ ಅಧ್ಯಕ್ಷರಾದ ರಾಜೀವ್ ಕುಮಾರ್ ಹಾಗೂ ಸಮಿತಿಯ ಸದಸ್ಯರಾದ ಇ.ವಿ. ರಾಜು ಅವರು ಕುಟುಂಬ ಸಮೇತವಾಗಿ ಅನಂತ ಪ್ರೇರಣಾ ಕೇಂದ್ರ ಮತ್ತು ಅದಮ್ಯಚೇತನಕ್ಕೆ ಭೇಟಿ ನೀಡಿದ್ದರು.

ಈ ಸಂದರ್ಭದಲ್ಲಿ ರಾಜೀವ್ ಕುಮಾರ್ ಮಾತನಾಡಿ, ಅದಮ್ಯ ಚೇತನದ ಶೂನ್ಯ ತ್ಯಾಜ್ಯ ಅಡುಗೆಮನೆಯಲ್ಲಿ ಪಳೆಯುಳಿಕೆ ಇಂಧನ ಬಳಸದೆ ಒಂದೇ ಬಾರಿಗೆ ಲಕ್ಷಾಂತರ ಜನಕ್ಕೆ ಅಡುಗೆ ಮಾಡುವ ವಿಧಾನವು ಬೆರಗು ಹುಟ್ಟಿಸುತ್ತದೆ, ಈ ರೀತಿಯ ಅಡುಗೆ ವಿಧಾನದಿಂದ ಪರಿಸರ ರಕ್ಷಣೆಯ ಜೊತೆಗೆ ಇಂಧನ ಅನಿಲವೂ ಉಳಿತಾಯವಾಗುತ್ತಿದೆ. ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆಗಳಿಗೆ ಸಂಬಂಧಿಸಿದ ಸಚಿವಾಲಯಗಳ ಅಧಿಕಾರಿಗಳು ಒಮ್ಮೆ ಈ ಅಡುಗೆ ಮನೆಯ ಮಾದರಿಯನ್ನು ಗಮನಿಸಬೇಕು. ಇದರಿಂದ, ಕ್ಯೋಟೋ ಪ್ರೋಟೋಕಾಲ್ ಗುರಿಯನ್ನು ಹೇಗೆ ಸುಲಭವಾಗಿ ಸಾಧಿಸಬಹುದು ಎಂದು ಅರಿಯಬಹುದು ಎಂದರು.

ಅನಂತ ಪ್ರೇರಣಾ ಕೇಂದ್ರ ಮತ್ತು ಅದಮ್ಯ ಚೇತನ ಸಂಸ್ಥೆಗೆ ಅರ್ಧಿ ವಿಶ್ವವಿದ್ಯಾಲಯದ ಸೀನಿಯರ್ ಪ್ರೊಫೆಸರ್ ಸ್ವೈ ಒಮಬೆನಿ, ಲಂಡನ್ ಯೂನಿವರ್ಸಿಟಿ ಆಫ್ ಈಸ್ಟ್ ಆಂಗ್ಲಿಯಾದ ಪ್ರೊಫೆಸರ್ ಆದ ನಿತ್ಯಾ ರಾವ್, ತಾಂಜಾನಿಯ ಮುಕ್ತ ವಿಶ್ವವಿದ್ಯಾಲಯದ ಬೆಥಿ ಮುತಾನ್ಯೋ, ಪರಮ ರಾಯ್, ಡಾ. ಚಾಂದಿನಿ ಸಿಂಗ್ ಭೇಟಿ ನೀಡಿದ ಇತರ ಗಣ್ಯರು.

**ಹಸಿರು ಭಾನುವಾರ**

ಅದಮ್ಯ ಚೇತನದ 'ಹಸಿರು ಭಾನುವಾರ' ಗಿಡ ನಡೆಯುವ ಕಾರ್ಯಕ್ರಮದಲ್ಲಿ ಪ್ರತಿವಾರವೂ ಹೆಚ್ಚಿನ ಸಂಖ್ಯೆಯಲ್ಲಿ ಎಲ್ಲ ವರ್ಗದ ಜನರು ಸ್ವಯಂ-ಉತ್ಸಾಹದಿಂದ ಭಾಗವಹಿಸುತ್ತಿದ್ದಾರೆ. ಅದರಂತೆ 342ನೇ ಹಸಿರು ಭಾನುವಾರ ಕಾರ್ಯಕ್ರಮವನ್ನು ಶ್ರೀ ಮಧ್ವ ಯುವಕ ಸಂಘ ಸಹಕಾರದಿಂದ ಕೆ. ಆರ್. ರಸ್ತೆಯಲ್ಲಿ, 343ನೇ ಗಿಡ ನೆಡುವ ಕಾರ್ಯಕ್ರಮವು ಕೆಂಪಾಂಬುಧಿ ಕೆರೆಯ ಆವರಣದಲ್ಲಿ ನಡೆಯಿತು. 344ನೇ ಹಸಿರು ಭಾನುವಾರ ಕಾರ್ಯಕ್ರಮವು ಹೆಚ್.ಎಸ್.ಆರ್. ಬಡಾವಣೆಯ ಸ್ವಾಭಿಮಾನ ಪಾರ್ಕ್‌ನಲ್ಲಿ ಆಯೋಜಿತವಾಗಿತ್ತು. 345ನೇ ಹಸಿರು ಭಾನುವಾರವನ್ನು ವೀರಭದ್ರನಗರದ ಶ್ರೀ ವೀರಭದ್ರೇಶ್ವರ ದೇವಸ್ಥಾನದ ಹತ್ತಿರ ಹಾಗೂ ಸ್ವಾತಂತ್ರ್ಯದ ಅಮೃತ ಮಹೋತ್ಸವದ ನೆನಪಿನಲ್ಲಿ ಅತ್ತಿಬೆಲೆಯ ಸೂರ್ಯನಗರದಲ್ಲಿ 346ನೇ ಹಸಿರು ಭಾನುವಾರದ ಕಾರ್ಯಕ್ರಮವನ್ನು ನಡೆಸಲಾಯಿತು. ಬಳ್ಳಾರಿ ಮತ್ತು ರಾಯಚೂರಿನ ಸ್ವಯಂಸೇವಾಕರ್ತರು ಕ್ರಮವಾಗಿ 149, 150 ಮತ್ತು 310, 311ನೇ ಹಸಿರು ಭಾನುವಾರ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿದರು.

**ಊಟದ ತಟ್ಟೆ ವಿತರಣೆ**

ಕಳೆದ ಕೆಲವು ತಿಂಗಳುಗಳಿಂದ ಅದಮ್ಯಚೇತನದ ವತಿಯಿಂದ ಪೌರಕಾರ್ಮಿಕರಿಗೆ ಊಟದ ತಟ್ಟೆಗಳನ್ನು ವಿತರಿಸಲಾಗುತ್ತಿದ್ದು, ಈ ತಿಂಗಳು ಗಿರಿನಗರ, ರಾಘವೇಂದ್ರ ಬ್ಲಾಕ್, ಮಿಲ್ಕ್ ಪಾರ್ಲರ್ ಗಿರಿನಗರ, ಆಡೆನ್ ಸ್ಕೂಲ್ ಗಿರಿನಗರ, ಹೊಸಕೆರೆ ಹಳ್ಳಿ ಕ್ರಾಸ್, ಹನುಮಂತನಗರ ವಾರ್ಡ್, ರಾಮಾಂಜನೇಯ ಗುಡ್ಡ, ಸ್ವಿಮಿಂಗ್ ಪೂಲ್ ಏರಿಯಾ, ಕುವೆಂಪು ರಂಗಮಂದಿರ ಮತ್ತು ಬಾಪೂಜಿ ನಗರ ಪ್ರದೇಶಗಳಲ್ಲಿ ಸ್ಟೀಲ್ ಊಟದ ತಟ್ಟೆಗಳನ್ನು ವಿತರಿಸಲಾಯಿತು.

**ನಿತ್ಯ ಅನ್ನದಾನ**

ಅದಮ್ಯ ಚೇತನದ ನಿತ್ಯ ಅನ್ನದಾನ ಗವಿಪುರ, ಜಯನಗರ, ನಗರ್ತಪೇಟೆ ಮತ್ತು ಆರ್.ಆರ್. ನಗರಗಳಲ್ಲಿ ನಿತ್ಯ ಅನ್ನದಾನ ವ್ಯವಸ್ಥೆ ಇದೆ. ಸೌತ್ ಎಂಡ್ ವೃತ್ತದಲ್ಲಿರುವ ಅನಂತ ಪ್ರೇರಣಾ ಕೇಂದ್ರದಲ್ಲಿ ಕಾಲೇಜ್ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಊಟ ಪ್ರಾರಂಭಿಸಲಾಗಿದೆ.

**ಶ್ರೀ ಚೇತನ ಸಭೆ**

ಶ್ರೀ ಚೇತನ ಸಭೆಯನ್ನು ಈಗ ಕಳೆದು ಎರಡು ವರ್ಷದಿಂದ ಗೂಗಲ್ ಮೀಟ್ ಜಾಲತಾಣದಲ್ಲಿ ನಡೆಸುತ್ತಿದ್ದು, ಪ್ರತಿ ಮಂಗಳವಾರ ಮಧ್ಯಾಹ್ನ 12 ಗಂಟೆಯಿಂದ 1.30 ವರೆಗೆ ನಡೆಯುವ ಈ ಸಭೆಯನ್ನು ಪ್ರಾರ್ಥನೆಯಿಂದ ಪ್ರಾರಂಭ ಮಾಡಿ, ದೇಶಭಕ್ತಿ ಗೀತೆ, ವಾರದ ಸುದ್ದಿ, ಕವಿ ನಮನ ಕಾರ್ಯಕ್ರಮದಲ್ಲಿ ಕುಮಾರವ್ಯಾಸನ ಪರಿಚಯ, ಒಂದು ಆರೋಗ್ಯಕರ ಅಡುಗೆಯ ಬಗ್ಗೆ ಪರಿಚಯ ಮುಂತಾದ ಕಾರ್ಯಕ್ರಮಗಳನ್ನು ನಡೆಸಲಾಗುತ್ತದೆ.

**ಭಗವದ್ಗೀತೆ ಪಠಣ**

ಭಗವದ್ಗೀತೆಯನ್ನು ನಿತ್ಯಜೀವನದಲ್ಲಿ ಅಳವಡಿಸಿಕೊಳ್ಳಲು ಸಹಕಾರಿಯಾಗಬೇಕೆಂಬ ದೃಷ್ಟಿಯಿಂದ ಪ್ರತಿ ಗುರುವಾರ ಸಂಜೆ 4 ಗಂಟೆಯಿಂದ 5 ಗಂಟೆಯವರೆಗೆ ಭಗವದ್ಗೀತೆಯ ಶ್ಲೋಕಗಳ ಪಠಣವನ್ನು ಅದಮ್ಯಚೇತನದ ಆವರಣದಲ್ಲಿ ನಡೆಸಲಾಗುತ್ತಿದೆ. ಅದಮ್ಯ ಚೇತನದಲ್ಲಿ ನಡೆಯುವ ಈ ಕಾರ್ಯಕ್ರಮದ ನಂತರ ಎಲ್ಲ ಭಾಗಿಗಳೂ ಅಡುಗೆಮನೆಯಲ್ಲಿ ತರಕಾರಿ ಹೆಚ್ಚುವ ಕೆಲಸದಲ್ಲಿ ಕೈಜೋಡಿಸುತ್ತಿದ್ದಾರೆ.

**ಇತರ**

ಹೊಸಕೆರೆ ಹಳ್ಳಿಯ ಗುಪ್ತಾ ಕಾಲೇಜಿನ ವಿದ್ಯಾರ್ಥಿಗಳು ಅದಮ್ಯಚೇತನಕ್ಕೆ ಭೇಟಿ ಅಲ್ಲಿನ ವ್ಯವಸ್ಥೆಯ ಬಗ್ಗೆ ತಿಳಿದುಕೊಂಡರು.

ಧಾರವಾಡದ ಸೇವಾ ಭಾರತಿ ಟ್ರಸ್ಟ್ ಹಾಗೂ ಅದಮ್ಯ ಚೇತನ ಟ್ರಸ್ಟ್ ಸಹಯೋಗದಲ್ಲಿ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಭೋಜನ ವ್ಯವಸ್ಥೆ 'ಬುತ್ತಿ' ಯೋಜನೆಗೆ ದೇವರಹುಬ್ಬಳ್ಳಿ ಸಿದ್ಧಾರೂಢ ಮಠದ ಶ್ರೀ ಸಿದ್ಧಶಿವಯೋಗಿ ಸ್ವಾಮೀಜಿ ಹಾಗೂ ರಾಷ್ಟ್ರೀಯ ಸ್ವಯಂಸೇವಕ ಸಂಘದ ಅಖಿಲ ಭಾರತೀಯ ವ್ಯವಸ್ಥಾ ಪ್ರಮುಖ ಶ್ರೀ ಮಂಗೇಶ ಭೇಂಡೆ ಜಿ ಚಾಲನೆ ನೀಡಿದರು. ●


ಅನಂತಪಥ

Editorial Advisory Committee: **Dr. Tejaswini Ananthkumar / Gopal T.S / K. Janardhana Thunga**
Layout: **Ananthakumar Pratishthana** Assistance: **Sanjay R / Trivikram Joshi / Madhumathi Kumbaluru**
Inputs: **Poornaprajna / Sreelakshmi Vishwanath / Srikanth K**
Photographs: **Adamya Chethana / Gopal TS / Chakrapani Kengeri / Internet Sources**
Acknowledgements: **Y B Rama Krishna / Gayathri Vasudev / Chaya Bapat**
Sketch: **Rashmi Killedar** Printed at: **Rashtrothana Mudranalaya, Chamrajpet, Bengaluru**
Published by: **Dr. Tejaswini Ananthkumar**

For-AnanthKumar Pratishthana # 12, Sumeru, M N Krishna Rao Road, Basavanagudi, Bangalore-04
Ph: 080 26568484 I Email: ananth.path@akp.org.in



ಸ್ಪಷ್ಟನೆ: ಅನಂತಪಥದಲ್ಲಿ ಪ್ರಕಟವಾಗಿರುವ ಲೇಖನಗಳ ವಿಚಾರ, ನಿಲುವು, ಅಭಿಪ್ರಾಯಗಳು ಆಯಾ ಲೇಖಕರವು:ಈ ಪಠ್ಯಾಂಶಗಳೆಲ್ಲ ಅನಂತಕುಮಾರ್ ಪ್ರತಿಷ್ಠಾನದ ಅಭಿಪ್ರಾಯಗಳೇ ಎಂದು ಭಾವಿಸುವ ಅಗತ್ಯವಿಲ್ಲ.
**ಸೂಚನೆ:** ಓದುಗರ ವಿಭಾಗಕ್ಕೆ ನೀವೂ ಪತ್ರಗಳನ್ನು ಬರೆಯಬಹುದು: ವಾಟ್ಸ್ ಆಪ್ ಇಲ್ಲವೇ ಮೊಬೈಲ್ ಸಂದೇಶದ ಮೂಲಕ ಅಭಿಪ್ರಾಯಗಳನ್ನು ಕಳುಹಿಸುವಿರಾದರೆ 8884182415 ಈ ಸಂಖ್ಯೆಯನ್ನು ಸಂಪರ್ಕಿಸಿ
To get a e-version of this periodical SMS your name and place to 8884182415

# ಅದಮ್ಯ ಸೇವಾ

( ಅದಮ್ಯ ಚೇತನ -ತಿಂಗಳ ಚಟುವಟಿಕೆಗಳ ಚಿತ್ರಸಂಪುಟ )



ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿಯ ಅಧ್ಯಕ್ಷರಾದ ಅನಿಲ್ ಸಹಸ್ರಬುದ್ಧೆಯವರು ಅನಂತ ಪ್ರೇರಣಾ ಕೇಂದ್ರಕ್ಕೆ ಭೇಟಿ ನೀಡಿದ ಸಂದರ್ಭ. ಚಿತ್ರದಲ್ಲಿ ಬಿ ಎಂ ಎಸ್ ಕಾಲೇಜಿನ ಪ್ರಾಂಶುಪಾಲರನ್ನೂ , ಪ್ರಾಧ್ಯಾಪಕರನ್ನೂ ಕಾಣಬಹುದು.




ರಾಷ್ಟ್ರೀಯ ಸ್ವಯಂಸೇವಕ ಸಂಘದ ಪರ್ಯಾವರಣ ಸಂರಕ್ಷಣಾ ಗತಿವಿಧಿ ಯ ರಾಷ್ಟ್ರೀಯ ಪದಾಧಿಕಾರಿಗಳು ಅದಮ್ಯ ಚೇತನಕ್ಕೆ ಭೇಟಿ ನೀಡಿ ಬಿಸಿಯೂಟ, ಹಸಿರು ಭಾನುವಾರ, ಪಳೆಯುಳಿಕೆರಹಿತ ಇಂಧನ ಕಸರಹಿತ ಅಡುಗೆಮನೆಯ ಬಗ್ಗೆ ಮಾಹಿತಿ ಪಡೆದರು.



ಅರ್ಧಿ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಪ್ರೊ. ಸ್ವೈ ಒಮಬೆನಿ, ಲಂಡನ್ ಯೂನಿವರ್ಸಿಟಿಯ ಪ್ರೊ. ನಿತ್ಯರಾವ್, ಮತ್ತಿತರರು ಅನ್ನಪೂರ್ಣ ಅಡುಗೆ ಮನೆ ವೀಕ್ಷಿಸುತ್ತಿರುವ ಸಂದರ್ಭ.



ಧಾರವಾಡದ ಸೇವಾ ಭಾರತಿ ಟ್ರಸ್ಟ್ ಹಾಗೂ ಅದಮ್ಯ ಚೇತನ ಟ್ರಸ್ಟ್ ಸಹಯೋಗದಲ್ಲಿ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಭೋಜನ ವ್ಯವಸ್ಥೆ 'ಬುತ್ತಿ' ಯೋಜನೆಗೆ ದೇವರಹುಬ್ಬಳ್ಳಿ ಸಿದ್ಧಾರೂಢ ಮಠದ ಶ್ರೀ ಸಿದ್ಧಶಿವಯೋಗಿ ಸ್ವಾಮೀಜಿ ಹಾಗೂ ರಾಷ್ಟ್ರೀಯ ಸ್ವಯಂಸೇವಕ ಸಂಘದ ಅಖಿಲ ಭಾರತೀಯ ವ್ಯವಸ್ಥಾ ಪ್ರಮುಖ ಶ್ರೀ ಮಂಗೇಶ ಭೇಂಡೆ ಜಿ ಚಾಲನೆ ನೀಡಿದರು.




ಅದಮ್ಯ ಚೇತನದಲ್ಲಿ ರಕ್ಷಾ ಬಂಧನ ಕಾರ್ಯಕ್ರಮ




ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಡಾ. ತೇಜಸ್ವಿನಿ ಅನಂತಕುಮಾರ್ ಅವರಿಗೆ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಂಗ ಸಂಸ್ಥೆ ವತಿಯಿಂದ ಸನ್ಮಾನ




ಅದಮ್ಯ ಚೇತನ ಸಂಸ್ಥೆಯಲ್ಲಿ ಪ್ರತಿ ಗುರುವಾರ ನಡೆಯುವ ಭಗವದ್ಗೀತೆ ಪಠಣ ಕಾರ್ಯಕ್ರಮ.




ಅದಮ್ಯ ಚೇತನ ಸಂಸ್ಥೆ ವತಿಯಿಂದ ಪೌರ ಕಾರ್ಮಿಕರಿಗೆ ಸ್ಟೀಲ್ ತಟ್ಟೆಗಳ ವಿತರಣೆ



ಅನಂತ ಪೇರಣಾ ಕೇಂದ್ರದಲ್ಲಿ ಪ್ರೌಢಶಾಲಾ ಮಕ್ಕಳಿಗಾಗಿ. ಮೈಕ್ರೋ ಪ್ಲಾಸ್ಟಿಕ್ ಜಾಗೃತಿ ಕಾರ್ಯಾಗಾರಗಳನ್ನು ಏರ್ಪಡಿಸಲಾಗುತ್ತಿದೆ.

## ಅನಂತ ಚಿತ್ರಸಂಪುಟ

ಶ್ರೀ ಅನಂತಕುಮಾರ್ ತಮ್ಮ ಬಾಲ್ಯದ ಕಾಲದಿಂದಲೂ ಕಲೆ, ನಾಟಕ, ಅಭಿನಯ ಮತ್ತಿತರ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ವಿಶೇಷ ಆಸಕ್ತಿ ಹೊಂದಿದ್ದರು. ಚಲನಚಿತ್ರ ಕ್ಷೇತ್ರದ ಅಭಿಮಾನಿಯಾಗಿದ್ದ ಅನಂತಕುಮಾರರು ಚಿತ್ರಕಲಾವಿದರೊಡನೆ ಗೌರವಾದರ ಪೂರ್ವಕ ಸ್ನೇಹವುಳ್ಳವರಾಗಿದ್ದರು.





















